ಅಜ್ಜ – ಯಾವುದು? ಇಡೀ ಸಿದ್ಧಾಂತವೇ ಹೋಗಬೇಕು. ಆಚೆಗೆ ತೃಪ್ತಿ ಅಲ್ಲಿ. ಆ ತೃಪ್ತಿ, ಆನಂದ ಅಲ್ಲುಂಟು. ಆ ಆನಂದದಿಂದ 'ನಾನು' ಹುಟ್ಟಿಕೊಂಡಿತು. ಹಾಗಾದರೆ 'ನಾನು'ವಿನ ಮೂಲಕ್ಕೆ ಹೋಗು. ಅಲ್ಲಿರುವುದು ಆನಂದ ಮಾತ್ರ. ನಾನು ಇಲ್ಲ. ನಾನು ಸತ್ತು ಹೋಯಿತು. ಹಾಗಾದರೆ ಜೀವಾತ್ಮನು ಬಂಧನದಿಂದ ಬಿಡುಗಡೆ ಹೊಂದಬೇಕಾದರೆ ಅವನು ತನ್ನ ಅಸ್ತಿತ್ವವನ್ನು ಕಳಕೊಳ್ಳಬೇಕು. ಇದು ಹ್ಯಾಗೆ – ಕರ್ಮ ಮತ್ತು ಜ್ಞಾನದಿಂದ, ತನ್ನ ಅಸ್ತಿತ್ವವನ್ನು ಕಳಕೊಂಡಾಗ, ಅವನು ಸ್ವತಂತ್ರನಾಗುತ್ತಾನೆ. ಅಂದರೆ ಆತ್ಮವೇ ಆಗುತ್ತಾನೆ. ನಿಲ್ಲಿ ನಿಲ್ಲಿ ಬರ್ಲಿ. ಆತ್ಮವೇ ಆಗುತ್ತಾನೆ. ಆತ್ಮವು ಸ್ವತಂತ್ರವು. ಅದುವೇ ನಿಜವಾದ ಸ್ವಾತಂತ್ರ್ಯ. ಅದುವೇ ಮಾನವ ಜನದ ಉದ್ದಿಶ್ಯ. ಇನ್ನು ಹೇಳೋದಾದ್ರೆ ಅದಕ್ಕಾಗಿಯೇ ಮಾನವ ಜನ್ಮ. ಆ ಉದ್ದಿಶ್ಯವು ನೆರವೇರಿದಾಗ ಏನಾಯ್ತು? ವ್ಯಕ್ತಿ ಸ್ವತಂತ್ರವಾಗುತ್ತಾನೆ. ಅದು ಪುನರ್ಜನ್ಮವಿಲ್ಲದ ಸ್ಥಿತಿ. ಆ ಅಸ್ತಿತ್ವವನ್ನು ಕಳಕೊಂಡವ ಮತ್ತೆ ಪುನರ್ಜನ್ಮಕ್ಕೆ ಬರಲಿಕ್ಕೆ ಅವ ಇಲ್ಲ. ಇದು ಸಾವಲ್ಲ. ಸಾವಾದರೆ ಪುನಃ ಜನ್ಮಕ್ಕೆ ಬರ್ತಾನಾ? ಅ್ಞಂ! ಬರೋದಿಲ್ಲ. ಹಾಗಾದರೆ ಆ ಸಾವು ಏನು? ಸಾವಂದರೆ ಏನು? ಯಾರಿಗೆ ಸಾವು? ಜಡಕ್ಕೆ ಸಾವಿಲ್ಲ ಅಲ್ಲ? ಜಡ ವ್ಯಕ್ತಿಗೆ ಸಾವುಂಟ? ಇಲ್ಲ. ಜೀವಂತ ವ್ಯಕ್ತಿಗೆ ಸಾವು ಸಂಭವಿಸಿದರೆ ಅದು ಸಾವು. ಮತ್ತೆ ಅವನು ಬರ್ಲಿಕ್ಕಿಲ್ಲ. ನಮಗೆ ಇದು ಬೇಕಾ? ನಮಗೆ ಬಿಡುಗಡೆ ಬೇಕಾ? ತೃಪ್ತಿ ಬೇಕಾ? ಮೊದಲು ಏನಾಗ್ಬೇಕು? ಒಂದು ಹತ್ತಿಪ್ಪತ್ತು ಪೆಟ್ಟು. ಅದರ ಮೂಲ ಶೋಧನೆ. ಪುನರ್ಜನ್ಮವಿಲ್ಲದ ಸ್ಥಿತಿ. ಅಂದ್ರೆ ಸಾವಿನಾಚೆಗಿನ ದ್ವಂದ್ವಾತೀತವಾದ ಬದುಕು. ಅಂದರೆ ಆ ಬದುಕು ಇದು ಬದುಕೇ ಅಲ್ಲ. ಈ ಬದುಕು ಬದುಕಲ್ಲ. ಅದು ಬದುಕು. ದ್ವಂದ್ವಾತೀತವಾದ ಬದುಕು. ಅಲ್ಲಿ ಎರಡಿಲ್ಲ. ಇದು ಸಾವಿನಾಚೆಗುಂಟು. 'ಬದುಕಲು ಕಲಿಯಿರಿ' ಎಂಬ ಪುಸ್ತಕವನ್ನು ನಾವೊಂದಿವಸ ನೋಡಿಯಾಯ್ತು. ಒಬ್ಬರು ತೋರಿಸಿದರು ನಮಗೆ ಒಂದು ಪುಸ್ತಕ ಉಂಟು ಅಂತ್ಹೇಳಿ. 'ಬದುಕಲು ಕಲಿಯಿರಿ' ಅಂತ್ಹೇಳಿ. ಛೆ! ಬದುಕ್ಲಿಕ್ಕೂ ಕಲೀಬೇಕಾ? ಅದು ಹ್ಯಾಗೆ ಬದುಕೋದಿಲ್ಲ. ನಾವು ಕಲೀಬೇಕಾದ್ದು 'ಸಾಯಲು ಕಲಿಯಿರಿ' ಅಂತ ನಾವು ಹೇಳಿಯಾಯ್ತು. ಸಾಯಲು ಕಲಿಯಿರಿ! ಈ ಬದುಕಲಿಕ್ಕೆ ಕಲಿಯೋದು ಬೇಡ. ಬದುಕ್ತಾ ಉಂಟು ಅದು ಹೇಗಾದ್ರೂ. ಸಾಯಲಿಕ್ಕೆ ಕಲೀಲಿ. ಬದುಕ್ಲಿಕ್ಕೆ ಅವ ಜನ್ಮಕ್ಕೆ ಬಂದಾಯ್ತಲ್ಲ. ಅಲ್ವಾ? ಅದು ಕಲಿಯೋದೆಂಥದು? ಸಾವಿನ್ನೂ ಬರ್ಬೇಕಷ್ಟೇ. [ಅದಕ್ಕೆ ಆಸರೆ (ಆಶ್ಚರ್ಯ) ಉಂಟು. ಆ ಆಸರೆಯನ್ನು (ಆಶ್ಚರ್ಯವನ್ನು) ಆ ಇದನ್ನೂ ಕಲೀಲಿಕ್ಕೆ]. ಆ ಸಾವಿನಾಚೆಗೆ ನಿಜವಾದ ಬದುಕು ಅಲ್ಲುಂಟು. ಅದುವೇ ದ್ವಂದ್ವಾತೀತವಾದ ಬದುಕು. ನಮಗೆ ಅದು ಬೇಕು. ತೃಪ್ತಿ ಸಿಕ್ಕಬೇಕಾದರೆ ನೋಡಿ, ತೃಪ್ತಿ ನಮಗೆ ಬೇಕಾ? ಶಾಂತಿ ಬೇಕಾ? ನೆಮ್ಮದಿ ಬೇಕಾ? ಬಿಡುಗಡೆ ಬೇಕಾ? ಅಲ್ಲಿ ಉಂಟು. ಎಲ್ಲುಂಟದು? ನಿಮ್ಮ ನಿಮ್ಮಲ್ಲಿಯೇ ಉಂಟು. ಶೋಧನೆ ಮಾಡಿ. ಶೋಧನೆ ಮಾಡುವವನೇ ಒಳಗಿದ್ದರೆ? ಅಲ್ಲಿ ಎಲ್ಲ ಉಂಟಲ್ಲ ರೆಡಿಮೇಡಾಗಿ. ನಮ್ಗೆ ಬೇಕೋ ಎಂಬುದೀಗ. ಕೆಲವು ಜನರು ಹೇಳಿದರು ಅಪ್ಪ ಇದೆಲ್ಲ ಕಷ್ಟಾಸಾಧ್ಯ. ನಮ್ಮಿಂದಲ್ಲ ಆಗುವಂಥಾದ್ದಲ್ಲ. ಇದು ಹಿಮಾಲಯದಲ್ಲಿ ಕೂತವರಿಗೆ ಇದು ಸಾಧ್ಯ. ನಮ್ಮ ವ್ಯವಹಾರದಲ್ಲಿ ಸಾಧ್ಯವೇ ಇಲ್ಲ ಅಂತ ಹೇಳುವವರಿದ್ದಾರೆ. ಅಲ್ವಾ? ನಾವು ಹೋಳೋದು ಹಾಗಲ್ಲ. ಹಿಮಾಲಯದಲ್ಲಿ ಕೂತವರಿಗೆ ಇದರ ಪ್ರಸ್ತಾಪವೇ ಬೇಡ. ನಮಗೆ ಬೇಕಾಗಿರುವುದು, ಸಂಸಾರದಲ್ಲಿರುವವರಿಗೆ ಇದು ಬೇಕೀಗ. ಈಗ ಸಂಸಾರದಲ್ಲಿರುವವರಿಗೆ ಗೊಂದಲ, ಅತೃಪ್ತಿ ಎಲ್ಲ ಇದೆ ಇಲ್ಲಿ. ಹಾಗಾದರೆ ನಮಗೆ ಬೇಕಾಗಿದ್ದೀಗ ಅವರಿಗಲ್ಲ. ಅವರಿಗಲ್ಲ ಅಂದ್ರೆ, ಅವರಿಗೂ ಗೊಂದಲ ಉಂಟು. ಹಾಗಾಗ್ಯೇ ಅವರು ಹಿಮಾಲಯಕ್ಕೆ ಹೋಗ್ಲಿಕ್ಕೆ ಕಾರಣ. ಹ್ಞಾಂ! ಅವರು ಹಿಮಾಲಯಕ್ಕೆ ಯಾಕೆ ಇಲ್ಲಿಂದ ಬಿಟ್ಟು ಹೋದ್ದು ಮನೆಯಿಂದ. ಇದರಿಂದ ತಪ್ಪಿಸಿಕೊಳ್ಳಲಿಕ್ಕೆ. ಅಲ್ಲಿ ತಪಸ್ಸು ಸಾವಿರಗಟ್ಟಲೆ ವರ್ಷ ಮಾಡ್ತಾರೆ. ಅದರಿಂದ ನಮಗೆ ಇದ್ದಲ್ಲೇ ನಮ್ಮ ಸಂಸಾರದಲ್ಲೇ ಸಂಸಾರ ಜೀವನದಲ್ಲೇ ಮನೆಯಲ್ಲೇ ಇದ್ದುಕೊಂಡು ನಾವು ನೋಡುವ. ಅ್ಞಂ! ಆ ಹಿಮಾಲಯದವರು ಇಲ್ಲಿ ಬರ್ಲಿ. ಇನ್ನು ಏನಪ್ಪ ಸಮಸ್ಯೆ ಅಂತ ಅವರು ನೋಡ್ಬೇಕು ಇನ್ನು. _______ ನಾವು ಸಾವಿರ ವರ್ಷ ತಪಸ್ಸು ಮಾಡಿ ನಮಗೆ ಸಿಗ್ಲಿಲ್ಲ. ಅಪ್ಪ ಈ ಸಂಸಾರದಲ್ಲಿದ್ದುಕೊಂಡು ಮನೆಯಲ್ಲೇ ಇದ್ದುಕೊಂಡು . . . ಅವ ನಮ್ಮನ್ನು ಹುಡುಕಿಕೊಂಡು ಬರ್ಲಿ. ಅ್ಞಂ! ಇದು ಮಾನವನ ಪ್ರಶ್ನೆ. ಟೈಂ ಆದ್ರೆ ಹೇಳಿ ಬಿಡಿ. ಟೈಂ ಆದ್ರೆ ಹೇಳ್ಬೇಕು. ನಮಗೆ ಟೈಂ ಗೊತ್ತಾಗ್ಲಿಕ್ಕಿಲ್ಲ. ಹ್ಹ ಹ್ಹ ಹ್ಹ. . . . (ನಗು) ಊಂ . . . ಎಂಷ್ಟಂತೆ?

ಒಬ್ಬರು – ಇನ್ನು ಒಂದೈದು ನಿಮಿಷ ಇದೆ.

ಅಜ್ಜ – ಐದು ನಿಮಿಷ ಇದೆ. ಇವತ್ತು ಮೌನ ಇತ್ತಪ್ಪ. ನಿಮ್ಮ ಮೌನಕ್ಕೆ ನಾವ ಸ್ವಲ್ಪ ಭಂಗ ತಂದ ಹಾಗೆ ಆಯ್ತಲ್ವ? ಅ್ಞಂ! ಇಲ್ಲದಿದ್ರೆ ಸ್ವಲ್ಪ ಒಂದೈದ್ನಿಮಿಷ ಆದ್ರೂ ಮೌನದಲ್ಲಿ ಇರುತಿದ್ರು. ಸ್ವಲ್ಪ ಸಮಾಧಾನ ಆಗ್ತಿತ್ತು. ಮನಸ್ಸಿಗೆ ನೆಮ್ಮದಿ. ಆದರೆ ಇದೆಲ್ಲ, ಇಷ್ಟೆಲ್ಲ ಬೇಕು. ಏನು ಅಂತ್ಹೇಳಿ ಕಂಡು ಹಿಡೀಲಿಕ್ಕೆ, ಗೊಂದಲದಲ್ಲಿ ಬೀಳಬೇಕು ನಂಗೆ. ಅಂದ್ರೆ ಬಹಳ ಸುಲಭವಾದ ದಾರಿಗಳುಂಟು. _ _ _ _ _ ಯಾರಿಗೆ ಬೇಕು ಎಂಬುದೇ ಪ್ರಶ್ನೆ ಇಲ್ಲಿ ಈಗ ಇರೋದು ಯಾರಿಗೆ ಬೇಕೂಂತ್ಹೇಳಿ. ಅವ ನಮ್ಮಲ್ಲೇ ಇದ್ದಾನೆ. ಅದು ನಿಮಗೆಲ್ಲರಿಗೂ ಗೊತ್ತುಂಟು. ನಿಮ್ಮ ನಿಮ್ಮಲ್ಲೇ ಇದ್ದಾರೆ ಅದು ಯಾವ್ದು, ಏನು ಅದು ಎಲ್ಲವೂ ಗೊತ್ತುಂಟು. ಅದು ನೀವು ಮಾಡ್ಬೇಕಾದ್ದು ಇಷ್ಟೇ. ಮೌನದಿಂದ . . . ನಾನು ಅಂದರೆ ಜೀವಾತ್ಮ ಅಂತ ಹೇಳಿ ಇಟ್ಟುಕೊಳ್ಳುವ. ನಮಗ್ಗೊತ್ತಿಲ್ಲ. ನೀನು ಅಂದರೆ ಪರಮಾತ್ಮ. ಪರಮಾತ್ಮನ ವಿಚಾರ

ನಮಗ್ಗೊತ್ತಿಲ್ಲ. ಗೊತ್ತುಂಟಾ? ನಾನು ಇದ್ದೇನೆ ಅಂತ ಗೊತ್ತುಂಟಲ್ಲ. ಆ್ಞಂ! ಇವ ಯಾರು ನೋಡುವ. ಇದನ್ನು ನೋಡುವಾಗ ಆ ನೀನುವಿಗೆ ಬಿಟ್ಟುಕೊಡ್ತದೆ. ನಾನೂ ಇಲ್ಲ, ನೀನೂ ಇಲ್ಲ. ಮತ್ತೆ ಅಲ್ಲಿ ಆನಂದ ಉಂಟು. ಅದುವೇ ಮೋಕ್ಷ. ಅದುವೇ ಬಿಡುಗಡೆ. ಅದುವೇ ತೃಪ್ತಿ. ಅಲ್ಲಿಗೆ ಹೋಗುವಲ್ಲಿವರೆಗೆ ತೃಪ್ತಿ ಎಂಬುದಿಲ್ಲ. ಅಲ್ಲಿಗೆ ಹೋಗಲಿಕ್ಕೆ ನಮಗೆ ಮಾರ್ಗದರ್ಶಿಗಳು ನಮ್ಮ ನಮ್ಮಲ್ಲಿಯೇ ಇದ್ದಾರೆ. ಅದು ಯಾರು ಎಂಬುದನ್ನು ನೀವೇ ಆಮೇಲೆ ಹೇಳ್ತೀರಿ. ಹ್ಹ ಹ್ಹ ಹ್ಹ . . .  ಗೊಂದಲ ಮಾಡಿ ಹಾಕಿ ಆಯ್ತಲ್ಲ. ಆಮೇಲೆ ನೀವು ಹೇಳ್ತೀರಿ ಓ ಸರಿ ಅದು ಅಂತ್ಹೇಳಿ. ಹಾಗಾದರೆ ನಮ್ದು ಪ್ರಶ್ನೆ ನಿಮ್ಮಿಂದ ಉತ್ತರವನ್ನು ನಾವು ತೊಕ್ಕೋಳ್ಳೋದೀಗ. ಉತ್ತರ ಕೊಡುವವರು ನೀವು ನಾವು ಪ್ರಶ್ನೆ ಕೇಳುವವರು. ಹಾಗಾದರೆ ನೀವು ಏನಾಗ್ಬೇಕೀಗ. ಉತ್ತರ ಕೊಡುವವರು ತುಂಬಾ ಜನ. ಅಲ್ವ? ನೀವೆಲ್ರೂ ಒಂದಾಗ್ಬೇಕೀಗ. ಒಂದೇ ಆಗಿ, ಒಂದೇ ಪ್ರಶ್ನೆಯನ್ನಿಟ್ಟುಕೊಂಡು ಅದನ್ನು ನೀವೆಲ್ರೂ ಶೋಧನೆ ಮಾಡಿ. ಒಂದೇ ವಿಚಾರದಲ್ಲಿ ಎಲ್ರದ್ದೂ ಶೋಧನೆ ಇರ್ಲಿ. ಆ್ಞಂ! ನೀವು ಒಂದೇ ಆಗ್ದೇ ಆಗೋದಿಲ್ಲ. ಅಂದ್ರೆ, ಮನಸ್ಸು ಬುದ್ಧಿ ಒಂದಾಗ್ಬೇಕೀಗ. ಅಂತರ್‌ವಿಚಾರ ಹೇಳುವುದಾದ್ರೆ ಆ್ಞಂ! ಎಂತಹ ಗೊಂದಲದ ಪ್ರಶ್ನೆ ಅಲ್ವ ಇದು? ಆ್ಞಂ! ಬೇಕು ಗೊಂದಲ. ಈ ಗೊಂದಲದ ಪ್ರಶ್ನೆಯನ್ನು ನೀವು ನಿಮ್ಮ ನಿಮ್ಮ ಮನೆಗೆ ಹೋದಾಗ, ೫ ನಿಮಿಷ ಆಲೋಚನೆ ಮಾಡಿ. ಇದು ಏನು ಸಮಸ್ಯೆ ಅಂತ ಅಷ್ಟೇ. ಬೇರೆ ಏನೂ ಬೇಡ. ಅದುವೇ ಧ್ಯಾನಕ್ಕೆ ಕೊಂಡು ಹೋಗ್ತದೆ. ಏನು ಸಮಸ್ಯೆ ಏನು ಅಂತ್ಹೇಳಿ. ನಿಮ್ಮ ನಿಮ್ಮಲ್ಲಿ ಪ್ರಶ್ನೆ ಹಾಕ್ಕೋಳ್ಳಿ, ಪ್ರತಿಯೊಬ್ಬರೂ. ಗೊಂದಲಕ್ಕೆ ಬಿದ್ದವರು, ಗೊಂದಲ ಇದ್ದವರು, ಬಿಡುಗಡೆ ಬೇಕು ಅಂತ್ಹೇಳಿ ಇದ್ದವರು. ಏನಿದು ಸಮಸ್ಯೆ? ಇಷ್ಟೇ ಸಾಕು. ಆ ಶೋಧನೆ ಮಾಡುವ ನೀವೇ, ಅಲ್ಲೇ ಇದ್ದಾನೆ. ಅವ ಮತ್ತೆ ಬರ್ತಾನೆ. ನಿಮ್ಮನ್ನು ಹುಡುಕಿಕೊಂಡು ಮಾರ್ಗದರ್ಶಿ ಬರಬೇಕಪ್ಪ. ನಾವು ಮಾರ್ಗದರ್ಶಿಗಳನ್ನು ಹುಡುಕಿಕೊಂಡು ಹೋಗೋದಲ್ಲ. ಅವರು ಸಿಕ್ಕೋದಿಲ್ಲ. ನಿಮ್ಮನ್ನು ಹುಡುಕಿಕೊಂದು ಬರಬೇಕು. ನೀವು ತಯಾರಾಗಿ. ಇನ್ನು ಆಧ್ಯಾತ್ಮಿಕಕ್ಕೆ ಹೋಗ್ತದೆ. ಆಧ್ಯಾತ್ಮ ಉಂಟು ಅಂತ ಹೇಳಿ ಆದರೆ. ಇಷ್ಟು ಸಮಸ್ಯೆಗಳಿಗೆ ಉತ್ತರ ಸಿಕ್ಕದೆ ನಮಗೆ ಆತ್ಮ, ಪರಮಾತ್ಮ, ಆಧ್ಯಾತ್ಮ ವಿಚಾರ ಸಿಕ್ಕೋದೇ ಇಲ್ಲ. ಹಾಗಾಗಿ ಧ್ಯಾನ ಮಾಡುವವರು ಯಾರಾದರೂ ಇದ್ರೆ, ಆ್ಞಂ! ನಾನು ಧ್ಯಾನಕ್ಕೆ ಕುಳಿತುಕೊಂಡಿದ್ದೇನೆ, ನಾನು ಧ್ಯಾನ ಮಾಡುತ್ತೇನೆ, ನಾನು ಧ್ಯಾನ ಮಾಡಿದ್ದೇನೆ, ಎಂಬ ಭಾವನೆಯನ್ನು ಬಿಟ್ಟು, ಭಾವನಾತೀತನಾಗಿ, ಕೆಲ್ಸ ಆಗ್ಲಿ. ಇನ್ನು ಜಾಗೃತಾವಸ್ಥೆಯ ವಿಚಾರಕ್ಕೆ ಹೋಗುವ. ಸುಪ್ತ ಮನಸ್ಸಿನ ಪ್ರಜ್ಞೆಗಳು. ಸುಪ್ತ ಮನಸ್ಸಿನ ಆ ಪ್ರಜ್ಞೆ ಜಾಗೃತನಾಗಬೇಕಾದರೆ ಈ ಮನಸ್ಸು ಲಯಸ್ಥಾನವನ್ನು ಹೊಂದದೆ ಅದು ಆಗೋದಿಲ್ಲ. ಅದು ಜಾಗೃತವಾಯ್ತು. ಅದು ಜಾಗೃತವಾದಾಗ ಈ ಮನಸ್ಸಿಲ್ಲ. ಹಾಗಾದರೆ ಇವನ ವ್ಯವಹಾರ ಹೇಗಾದೀತು ಹೇಳಿ? ಇವನ ವ್ಯವಹಾರ ಹ್ಯಾಗಾದೀತೂಂತ್ಹೇಳಿ. ಇಲ್ಲಿ ಭಯ ಬರ್ತದೆ. ಈ ಮನಸ್ಸು ಹೇಗಿರ್ತದೆ – ಖಾಲಿಯಾಯ್ತಲ್ಲ. ಎರಡನೇ ತುಂಬದೆ ಇದ್ರೆ ಹೇಗಿರ್ತದೆ. ಇದು ಭಯ. ಹಾಗಾದರೆ ಭಯದಿಂದ ಆಚೆಗೆ ಹೋಗ್ಬೇಕು. ಹಾಗಾದರೆ ಭಯಕ್ಕೆ ಪ್ರಾಧಾನ್ಯತೆ ಕೊಟ್ಟಾಗ ಆಚೆಗೆ ನಮಗೆ ದಾಟ್ಲಿಕ್ಕೆ ಆಗ್ತದೆ. ಎಲ್ಲವೂ ಅಲ್ಲಿ ಉಂಟು. ರೆಡಿಮೇಡಾಗಿ. ನಿಮ್ಮ ನಿಮ್ಮಲ್ಲಿ ಪ್ರತಿಯೊಬ್ಬನಲ್ಲಿಯೂ ಉಂಟದು. ಸಾವಿನಾಚೆಗಿನ ಬದುಕಿನ ವಿಚಾರಗಳು. ಸಾವೆಂದರೆ ತನ್ನ ಅಸ್ತಿತ್ವವನ್ನು ಕಳಕೊಳ್ಳುವಂಥಾದ್ದು. ಆ ಅಸ್ತಿತ್ವ ಯಾವುದು? 'ನಾನು' ಪವರ್‌ಫುಲ್ ಆಗಿ ಉಂಟು. ಅದು ಅದರ ಅಸ್ತಿತ್ವವನ್ನು ಕಳಕೊಂಡಾಗ, ಆಚೆಗೆ ನೋಡುವ ಮತ್ತೆ. ನಾವು ಇಷ್ಟು ಮಾತಾಡುವಾಗ್ಲೂ, ನಿಮ್ಮ ಮನಸ್ಸಿನಲ್ಲಿ ನಿಮ್ಮಲ್ಲಿ ನೀವು ಇಟ್ಟುಕೊಳ್ಳಿ – ಅದಕ್ಕೆ ಬೇಕಾಗಿ ನಾವು ಇಷ್ಟು ಮಾತಾಡ್ತದೆ. ನಾವು ನೋಡ್ತದೆ ನಿಮ್ಮನ್ನು. ಈ ಮೌನಧ್ಯಾನಕ್ಕೆ ಪ್ರಾರಂಭ ಆಗಿ ಹೋಯ್ತು ಆವಾಗ್ಲೇ. ಇತ್ಲಾಗೆ ದೃಷ್ಟಿ ಹಾಕ್ತಾ ಇದ್ದೀರಪ್ಪ. ಏನು ಮಾತು ಬರ್ತದೆ ಅಂತ ಹೇಳಿ. ಆ್ಞಂ! ನಿಮ್ಮ ಧ್ಯಾನಕ್ಕೆ ವಿಘ್ನ ಬಂತು. ಧ್ಯಾನಕ್ಕೆ ವಿಘ್ನ ಬಂತು. ಅದು ಯಾರು ವಿಘ್ನ ಮಾಡಿದ್ದು? ನಾವು. ಆ್ಞಂ! 'ನಾನು' ವಿಘ್ನ ಮಾಡಿದ್ದು. ಅಂದರೆ ನಾನು ಅಲ್ಲಿಯೇ ಉಂಟು. ಅಲ್ಲಿಯೂ ಉಂಟು, ಇಲ್ಲಿಯೂ ಉಂಟು. ಎಲ್ಲಾ ಉಂಟು. ಇದು ಏನು ಸಮಸ್ಯೆ ಹೇಳಿ. ಈ ಸಮಸ್ಯೆಗೆ ನಮಗೆ ಪರಿಹಾರ ಬೇಕೀಗ. ಅಲ್ಲ? ಬೇಡ್ವಾ? ಪರಿಹಾರ ಬೇಕೇ ಬೇಕು. ಅದು ಹಾಗೇ ನಿಲ್ಬಾರ್ದು. ಗೊಂದಲಕ್ಕೊಂದು ನಿವೃತ್ತಿ ಸ್ಥಾನ. ನೋಡುವ ಈಗ ನಾಳೆ ಶುಕ್ರವಾರ, ಶನಿವಾರ, ನಾವು ಎರ್ಡು ದಿವ್ಸ ಇದ್ದೇವಪ್ಪ.

ಒಬ್ಬರು – ಭಾನುವಾರಾನೂ . . .

ಅಜ್ಜ – ಹ್ಹ ಹ್ಹ. . . ಭಾನುವಾರ ಆಗೋದಿಲ್ಲ. ಅದ್ರ ಮೊದ್ಲೇ ನಿಮ್ಗೆ ಏನು ಉತ್ತರ ಸಿಕ್ತದೆ ನೋಡುವ. ನೀವು ತಕ್ಕೊಳ್ಬೇಕು ಉತ್ತರ – ಇಲ್ಲಿಂದ ಕೊಡೋದಾದ್ರೆ. ನಿಮ್ದು ಉತ್ತರ ನಾವು ತಕ್ಕೊಳ್ತದೆ, ನೀವು ಕೊಡೋದ್ಬೇಡ. ನಿಮ್ಮ ಉತ್ತರವನ್ನು ನಾವು ತಕೊಳ್ತೇವೆ. ನಮ್ಮ ಉತ್ತರ ಬೇಕಾದರೆ, ನೀವು ತಕ್ಕೊಳ್ಬೇಕು. ನಾವು ಸರಿಸಮಾನ. ನಿಮ್ಮ ಕೈಯಲ್ಲುಂಟು ತೆಗೊಳ್ಳೋದು. ಕೊಡ್ಲಿಕ್ಕೆ ನಮ್ಮಲ್ಲೇನಿಲ್ಲ ಏನು? ನಮ್ಮದಲ್ವೂ ಅಲ್ಲ. ಅಥವ ಕೊಟ್ಟರೆ ಅದು ನಿಲ್ಲೋದೂ ಇಲ್ಲ. ನಿಮ್ಮ ಸ್ವತ್ತನ್ನು ನೀವು ಪಡಕೊಳ್ಳಿ. ರೆಡಿಮೇಡಾಗಿ ಉಂಟು ಎಂಬುದು ಸಿದ್ದಾಂತ.

೧೧-೦೬-೧೯೯೪

ಅಜ್ಜ – ಅದಕ್ಕೆ ನಾವು ಉತ್ತರ ಹೇಳ್ಬೇಕಾಗಿದೆ. ಎಂಥ ಮೌನ ಅಂತ್ಹೇಳಿ. ಪ್ರಶ್ನೆ ಬಿತ್ತಿಲ್ಲಿ ಈಗ. ಎಂಥ ಮೌನಾಪ್ಪ. ನಾವು ಕೃತಿಯ ರೂಪಿಯವರು. ಪದ್ಯ ಹಾಡಿ ಆಯ್ತು. ಈಗ ನಾವು ಅದಕ್ಕೆ ಕೃತಿಯ ರೂಪದಲ್ಲಿ ಸ್ವಲ್ಪ ಉತ್ತರ ಕೊಡ್ಬೇಕಾಗ್ತದೆ. ಹೌದು ಆ ಶಬ್ದಕ್ಕೆ, ವ್ಯಕ್ತಿಗಲ್ಲ. ಆ ಶಬ್ದ ಎಂಥ ಮೌನ? ನಮಗೆಲ್ಲರಿಗೆ ಗೊತ್ತುಂಟು. ಮೌನ ಅಂದ್ರೆ ಎಂಥದು. ಯಾಕೇಂದ್ರೆ ನಾವು ಯಾವಾಗ್ಲೂ ಮೌನದಲ್ಲಿ ಸ್ವಲ್ಪ ೫ ನಿಮಿಷ ಇರ್ತೇವಲ್ಲ? ಅ್ಹಂ! ಎಂಥ ಮೌನ ಅಂತ ಕೇಳುವ ಪ್ರಶ್ನೆಗೆ ಎಡೆಯೇ ಇಲ್ಲ. ಆದ್ರೂ ಕೇಳಿಯಾಯ್ತು. ಅ್ಹಂ! ಮನಸ್ಸಿನ ಮೌನವಾ? ಮಾತಿನ ಮೌನವಾ? ಹಾಗಾದರೆ ನಾವೆಲ್ಲ ಈಗ ಆಚರಿಸುವಂಥಾದ್ದು ಮಾತಿನ ಮೌನ. ಮನಸ್ಸಿನ ಮೌನವಲ್ಲ. ನಮಗೆ ಬೇಕಾದ್ದು ಮನಸ್ಸಿನ ಮೌನ. ಅಲ್ವಾ? ಆದರೆ ಮಾತಿನ ಮೌನ ಬೇಕು. ಯಾತಕ್ಕೆ? ಅದಕ್ಕೆ ಪೂರಕವಾಗಿ ಇದುಂಟು. ಮಾತಿನ ಮೌನಕ್ಕೆ ವಿಧಿನಿಯಮಗಳೇನಿಲ್ಲ. ಆದರೆ ವಿಧಿನಿಯಮಗಳು ನಿಷೇಧವೂ ಅಲ್ಲ. ವಿಧಿನಿಯಮಗಳ ಅಗತ್ಯವಿಲ್ಲ. ಕಣ್ಣು ಮುಚ್ಚಬೇಕು, ಅದು, ಇದು, ಎಲ್ಲ ಉಂಟು. ಆದ್ರೆ ಅದು ದೋಷ ಇಲ್ಲ. ಆದರೆ ಇದು ಬೇಕು ಅಂತ್ಹೇಳಿ ಇಲ್ಲ. ಈಗ ಮಾನಸಿಕ ಮೌನ. ಮನಸ್ಸೆಂದರೆ ಏನು ಅಂತ ನಾವು ನೋಡದೆ, ಮಾನಸಿಕ ಮೌನ . . . ಎಂಥದು ಮನಸ್ಸೆಂದರೆ? ಮನಸ್ಸೆಂದರೆ ಎಂಥದು? ಎಂಥ ಮೌನ ಅಂತ್ಹೇಳಿ ನಾವು ಉತ್ತರೆ ಕೊಡ್ಬೇಕಲ್ಲ, ಕೃತಿಯ ರೂಪದಲ್ಲಿ ಕೊಡ್ಬೇಕು. ಬಾಯಿಂದ ಎಷ್ಟೂ ಕೊಡಬಹುದು. ಅದು ನಮಗೆ ಬೇಡ. ಯಾವ ತತ್ತ್ವ ಸಿದ್ಧಾಂತಗಳೂ ನಮಗೆ ಬೇಡ. ನಮಗೆ ಗೊತ್ತೂ ಇಲ್ಲ. ನಮಗೆ ಬೇಡವೂ ಬೇಡ. ಆಗಲಿ. ಯಾಕಾಗಿ ಮೌನ? ಯಾಕಾಗಿ ಮೌನ. ಈ ಗೊಂದಲಗಳ ಸಮಸ್ಯೆಗೆ ನಿವೃತ್ತಿಯನ್ನು ಕಾಣಲಿಕ್ಕಾಗಿ ಮೌನ. ಅಲ್ಲವ? ಗೊಂದಲಗಳು ಇಲ್ಲದೆ ಇರುವವರು ಯಾರಾದರೂ ಇದ್ದಾರಾ? ಇದ್ದರೆ ಹೇಳಿಬಿಡಿಯಪ್ಪ. ನೆಮ್ಮದಿ ಇಲ್ಲದಿರುವವರು ಯಾರಾದರೂ ಇದ್ದಾರಾ? ಇರಬಹುದು ಯಾರಾದರೂ. ನೋಡಿ. ನೆಮ್ಮದಿ ಇಲ್ಲದವರು ಇದ್ದಾರಾ ಅಂತ್ಹೇಳಿ. ಅಲ್ಲ ನೆಮ್ಮದಿ ಇದ್ದವರು ಅಂತ ಹೇಳಿಯಾ? ಹ್ಯಾಗಪ್ಪ ಅದು ಸರಿಮಾಡಿಕೊಳ್ಳಿ. ನಮಗೆ ಈಗ ನೆಮ್ಮದಿ ಇರುವವರೂ ಬೇಕು, ಇಲ್ಲದವರೂ ಬೇಕು. ಆ ನೆಮ್ಮದಿ ಇದ್ದವರನ್ನು, ಅವರ ಜತೆಗೆ ನಾವು ಕೂಡಿಕೊಂಡು, ನೆಮ್ಮದಿ ಇಲ್ಲದವರಿಗೆ, ಸ್ವಲ್ಪ ಉತ್ತರ ಕೊಡುವ ಅಂತ್ಹೇಳಿ. ಅದಕ್ಕೆ ನಾವು ಕೇಳುವುದು ಈಗ. ನಮ್ಮ ಒಬ್ಬನಿಂದ ಆಗೋದಿಲ್ಲ, ಒಬ್ರು ಬೇಕು ಸಹಾಯಕ್ಕೆ. ಮನಸ್ಸಿಗೆ ತಾಕತ್ ಸಾಕಾಗೋದಿಲ್ಲ. ಬುದ್ಧಿ ಜತೆ ಸೇರಿದರೇನೇ ಮನಸ್ಸಿಗೆ ತಾಕತ್ತು ಬರ್ತದೆ.

ಒಬ್ಬರು – ನಾನು ಬೇರೆಯವರ ನೆಮ್ಮದಿಯನ್ನು ಕೆಡಿಸುವವನು.

ಇನ್ನೊಬ್ಬರು – ಸರಿಯಾದವರು ಸಿಕ್ಕಿದರು ಅಜ್ಜ. ಅವರನ್ನು ಹಿಡ್ಕೊಳ್ಳಿ.

ಅಜ್ಜ – ಅವರು ಸಿಕ್ಕಿದರಾ? ಅ್ಹಂ!

ಹಾಗಾದರೆ ನೋಡಿ ನಾವೆಲ್ರೂ ಒಂದಾಗಿ ಇದಕ್ಕೊಂದು ಉತ್ತರ ಕಂಡು ಹಿಡೀಬೇಕು. ನಾವೆಲ್ರೂ ಒಂದಾಗುವಾಗ ನೋಡಿ, ನಾವು ಇಲ್ಲಿ ನಿನ್ನೆ ಹೇಳಿಯಾಯ್ತು. ಇದೆಲ್ಲ ಅಗತ್ಯ ಇಲ್ಲ, ಒಂದೂ ಮಾತು ಅಗತ್ಯ ಇಲ್ಲ. ಮಾತುಗಳು ಕೃತಿಯಾಗುವುದಿದ್ದರೆ ಮಾತ್ರ ಮಾತಿಗೆ ಪ್ರಯೋಜನ. ಇಲ್ಲವಾದರೆ ಭಾಷಣ ಆಯಿತದು. ಪ್ರವಚನ ಆಯ್ತು. ನಮಗೆ ಬೇಕಾ? ಭಾಷಣ, ಪ್ರವಚನಗಳು? ಪುಸ್ತಕಗಳಿಲ್ವಾ? ಹಾಗಾದರೆ ಇದಕ್ಕೆ ದಾರಿ ಏನು ಅಂತ್ಹೇಳಿ. ದಾರಿ ನಮಗೆ ಗೊತ್ತುಂಟು. ಪ್ರತಿಯೊಬ್ಬರಿಗೂ ಗೊತ್ತುಂಟು. ಗೊತ್ತುಂಟು. ಖಂಡಿತ ಗೊತ್ತುಂಟು. ನಮಗದು ಬೇಡ. ಇವತ್ತು ನೆಮ್ಮದಿ ಬೇಡ, ಶಾಂತಿ ಬೇಡ, ತೃಪ್ತಿ ಬೇಡ. ಅದಾಗಿಬಿಟ್ಟರೆ ನಮ್ಮ ಕೆಲಸ ಎಲ್ಲ ನಿಂತು ಹೋಯ್ತು. ಮನೆಯಲ್ಲಿ ಆ ದಿವಸ ಅಡಿಗೆ ಯಾರೂ ಮಾಡ್ಲಿಕ್ಕಿಲ್ಲ. ನೆಮ್ಮದಿ, ತೃಪ್ತಿ ಇದ್ದರೆ ಆರಾಮಿರ್ತಾರೆ. ಅ್ಹಂ! (ನಗು) ಹಾಗಾಗಿ ನಮಗೆ ಈವತ್ತು ಯಾವ್ದು ಬೇಕಾದ್ದು? ಅಶಾಂತಿ ಅಲ್ವಾ? ಅತೃಪ್ತಿ ಬೇಕು ನಮಗೆ. ಅಲ್ಲ ಅಶಾಂತಿ ಬೇಕೋ? ನಮಗೆ ಬೇಕಾದ್ದು ಯಾವ್ದೀಗ? ಈಗ ಅಶಾಂತಿ ಜಾಸ್ತಿ ಆಗಿದೆಯಾ? ಇಲ್ಲಪ್ಪ. ಎಲ್ಲುಂಟು ಅಶಾಂತಿ ಹೇಳಿ ನೋಡುವ. ನಿಮ್ಮ ಜೀವನವನ್ನೇ ತೆಕ್ಕೊಳುವ ನಾವು. ಅಶಾಂತಿ ಎಲ್ಲಿ ಉಂಟು? ನಡೀತಾ ಉಂಟಲ್ಲ? ಅ್ಹಂ! ಅಶಾಂತಿ ಬಂದರೆ ನಡೀತದಾ? ಅದಕ್ಕೆ ಕಾರಣ ಅದೇನೇ. ಜ್ವರ ಬಂದು ಬಿಟ್ರೆ ಅವ ಮಲಗ್ತಾನೆ. ಅಲ್ವ? ಅ್ಹಂ! ಅವ ಜ್ವರ ಬರ್ತದಂತ ಭಾವಿಸ್ತಾನೆ. ಅಶಾಂತಿ ಅಂತ ಭಾವಿಸ್ತಾನೆ. ನಿಜವಾಗಿ ಅಶಾಂತಿ ಇಲ್ಲ. ಇದ್ದರೆ ಪರಿಸ್ಥಿತಿಯೇ ಬೇರೆ ಅದು. ಅಶಾಂತಿ ಇದ್ದರೆ ಪರಿಸ್ಥಿತಿಯೇ ಬೇರೆ. ಅವ ಆ ದಿವಸ ಆಫೀಸಿಗೆ ಹೋಗೋದಿಲ್ಲ. ಅಶಾಂತಿಯಲ್ಲಿ ಬಿದ್ದು ಬಿಟ್ಟರೆ. ಅಶಾಂತಿ ಅಂತ ಬಾಯಲ್ಲಿ ಹೇಳ್ತಾನೆ. ಆಫೀಸಿಗೆ ಹೇಗಿ ಬರ್ತಾ, ಹೋಗ್ತಾ ಬರ್ತಾ ಕೆಲ್ಸ ಆಗ್ತಾ ಉಂಟು. ಎಲ್ಲಿ ಅಶಾಂತಿ ಉಂಟು? ನಾವು ಶಾಂತಿಯನ್ನು ಹುಡುಕುತ್ತೇವೆ. ಈ ಎಲ್ಲಾ ಪ್ರಶ್ನೆಗಳೂ ಅವರವರಲ್ಲಿಯೇ ಉಂಟೆಂದು. ಎಲ್ಲ ಸಮಸ್ಯೆಗಳಿಗೂ ಅವರವರೇ ಪ್ರಶ್ನೆ ಹಾಕಿಕೊಳ್ತಾರೆ. ಅಲ್ಲವ? ನೆಮ್ಮದಿ ಸಿಕ್ಕಿಬಿಟ್ಟರೆ ಆಯ್ತು ಅವನಿಗೆ. ತೃಪ್ತಿ ಆದರೆ ಆಯ್ತು. ಬಿಡುಗಡೆ ಆದರೆ ಆಯ್ತು. ಮತ್ತೆ ಏನುಂಟು ಈ ಪ್ರಪಂಚದಲ್ಲಿ. ಏನಿಲ್ಲ. ಹಾಗಾದರೆ ಪ್ರಪಂಚದಲ್ಲಿ ಇರಬೇಕು. ಜೀವಮಾನ

ಕಾಲ ಇಡೀ ನಮಗೆ ಜೀವಿಸಬೇಕು ಅಂತ ಹೇಳಿ ಇದ್ದರೆ, ನಮಗೆ ಅಶಾಂತಿ ಬೇಕು, ಬಂಧನ ಬೇಕು. ಅಲ್ಲ ಈ ಯಾವ ಪ್ರಪಂಚದ ಇದು ಬೇಡ ಅಂತ್ಹೇಳಿ ಇದ್ದರೆ, ನಾವು ತೃಪ್ತಿಯ ದಾರಿಯನ್ನು, ಬಿಡುಗಡೆಯ ದಾರಿಯನ್ನು ಹುಡುಕುವ. ಇದು ಯಾವುದೂ ಬೇಡ ಅಂತ್ಹೇಳಿ ಇದ್ದವರು ಇದ್ದಾರಾ ಯಾರಾದರೂ? ಜೀವನವೇ ನಮಗೆ ಪ್ರಯೋಜನ ಇಲ್ಲ ಅಂತ ಹೇಳುವವರು ಇದ್ದಾರಾ? ಇಲ್ಲವೇ ಇಲ್ಲ. ಯಾರೂ ಇಲ್ಲ. ಹಾಗಾದರೆ ನಾವು ಶಾಂತಿಗೆ ಯಾಕೆ ಹುಡುಕುವುದು. ನಮಗೆ ಇದೇ ಆಗ್ಬಹುದು. ಅಶಾಂತಿಯೇ ಆಗ್ಬಹುದು. ಇದ್ದದ್ದರಲ್ಲಿ ನಾವು ತೃಪ್ತಿ ಪಡುವ. ಆಗದಾ? ಆ್ಞಂ! ಅದೂ ಆಗೋದಿಲ್ಲ. ಯಾವುದು ಮತ್ತೆ ಆಗ್ತದೆ? ಒಟ್ಟಾರೆ ಸಮಸ್ಯೆ ಏನು? ಮಾನವನ ಸಮಸ್ಯೆ ಏನು ಎಂಬುದು ನಮಗೆ ಈಗ ಬೇಕು. ಈ ಮಾನವನ ಒಂದು ಸಮಸ್ಯೆ ಉಂಟಲ್ಲ, ಅದು ಒಂದೇ ಸಮಸ್ಯೆ ಇರೋದು. ಅದು ಯಾವುದು? ಬಿಡುಗಡೆ. ಆ್ಞಂ!

ಒಬ್ಬರು – ಬುದ್ಧಿಯಿಂದ ಬಿಡುಗಡೆ ಆಗಬೇಕು.

ಅಜ್ಜ – ಬುದ್ಧಿಯಿಂದ ಬಿಡುಗಡೆ ಆಗೋದಲ್ಲ. ಬಂಧನದಿಂದ ಬಿಡುಗಡೆ ಆಗಬೇಕು. ಅಲ್ಲ. ಅದು ಶಬ್ದ ಬೇರೆ. ಅದು ಎರಡೂ ಒಂದೇ. ಅದು ಹ್ಯಾಗೂ ಇರಲಿ. ಬಿಡುಗಡೆ ಯಾವುದರಿಂದ? ಬಂಧನದಿಂದ. ನಮಗೆ ಬಂಧನ ಈಗ ಬಂದದ್ದೋ ಅಂತ ಹೇಳಿ ನಾವು ಕೇಳೋದು. ಜ್ವರ ಬಂದದ್ದೋ, ಡಾಕ್ಟರ್ ಇದ್ದಾರೆ. ಜ್ವರ ಬಂದದ್ದೋ ಎಂಬ ಪ್ರಶ್ನೆ ಇಲ್ಲಿ ಈಗ ಇರೋದು. ಬಂಧನ ಎಂಬುದು ಪ್ರಾಪ್ತಿ ಆಗ್ಯದೋ ಅಂತ್ಹೇಳಿ. ಇಡೀ ಇರೋದೀಗ ನಮಗೆ ಬಂಧನ ಪ್ರಾಪ್ತಿ ಆಗ್ಯದೋ ಎಂದ್ಹೇಳಿ. ನಿಮ್ಮ ನಿಮ್ಮ ಜೀವನದಲ್ಲಿ ನೀವು ನೋಡಿ, ಪ್ರಾಪ್ತಿ ಆಗ್ಯದೋ ಅಂತ್ಹೇಳಿ. ದಾರಿ ಉಂಟು. ದಾರಿ ಇಲ್ಲ ಅಂತ ಹೇಳೋದು ಬ್ಯಾಡ. ಅಲ್ಲ ಯಾರೋ ಹೇಳೋದೂ ಇಲ್ಲ. ಪ್ರಾಪ್ತಿ ಆಗ್ಯದೋ ಅಂತ್ಹೇಳಿ. ಬಂಧನವೇ ಇಲ್ಲವಾದರೆ ಬಿಡುಗಡೆಯ ಪ್ರಶ್ನೆಯೇ ಇಲ್ಲ. ಅಲ್ಲವಾ? ಆ್ಞಂ! ಅತೃಪ್ತಿ ಆಗದಿದ್ರೆ, ತೃಪ್ತಿಯ ಪ್ರಶ್ನೆಯೇ ಇಲ್ಲ. ಹಾಗಾಗಿ ಮೊದಲು ಈಗ ಬಂಧನ, ಅದೇ ಅಲ್ಲ ಬೇಕಾದ್ದು ನಮಗೆ? ಬಂಧನ ಪ್ರಾಪ್ತಿ ಆಗ್ಯದೋ ಅಂತ್ಹೇಳಿ. ನಾವು ಹುಡುಕುವುದು ಬಿಡುಗಡೆಯ ದಾರಿಯನ್ನೇ. ಇಲ್ಲಿ ಬಂಧನ ಏನಾಗಿಲ್ಲ. ಅಥವ ಬಂಧನ ಬಂದರೂ, ಅದಕ್ಕೆ ನಿವೃತ್ತಿಯನ್ನು ಹುಡುಕುತ್ತಾರೆ. ಹೇಗೆ ಅದರಿಂದ ಬಿಡುಗಡೆ–ಪಾರಾಗುವುದು ಅಂತ್ಹೇಳಿ. ಬಂಧನದಿಂದ ಪಾರಾಗೋದು ಹೇಗೆ ಅಂತ. ಬಂಧನಕ್ಕೆ ಎಡೆ ಕೊಡೋದಿಲ್ಲ. ಆ ಬಂಧನ ಬೆಳೀಬೇಕಲ್ಲ. ಆ ಬೆಳೀಲಿಕ್ಕೆ ಎಡೆ ಕೊಟ್ಟಾಗ ಅಲ್ಲಿ ನಿವೃತ್ತಿ ಸ್ಥಾನ ಉಂಟು. ಕಾಯಿ ಹಣ್ಣಾಗಬೇಕಾದರೆ, ಆ ಕಾಯಿಯ ಬೆಳವಣಿಗೆ ಆಗ್ಬೇಕಲ್ವಾ? ಯಾರಿಗೆ ಬಂಧನ ಉಂಟು? ಯಾರಿಗೆ ಅತೃಪ್ತಿ ಉಂಟ್ಹೇಳಿ.

ಒಬ್ಬರು – ಬಿಡುಗಡೆ ಆಗ್ಬೇಕಾದ್ರೆ ಬಂಧನ ಬೇಕೇ ಬೇಕೇ?

ಅಜ್ಜ – ಆ್ಞಂ! ಅಲ್ಲವಾದ್ರೆ ಬಿಡುಗಡೆಯ ಪ್ರಶ್ನೆಯೇ ಬರೋದಿಲ್ವಲ್ಲ ಅಲ್ಲಿ. ಈ ಬಂಧನ ಇಲ್ಲವಾದ್ರೆ ಬಿಡುಗಡೆಯ ಪ್ರಶ್ನೆ ಉದ್ಭವವಾಗೋದಿಲ್ವಲ್ಲ ಅಲ್ಲಿ. ಅಲ್ವ ನೋಡಿ.

ಒಬ್ಬರು – ಯಾವ ರೀತಿ ಬಂಧನ?

ಅಜ್ಜ – ಯಾವ ರೀತಿ ಬಂಧನ ಅಂದ್ರೆ?

ಒಬ್ಬರು – ಮನುಷ್ಯರ ಸಂಬಂಧ ಇದೆಯಲ್ಲ ಆ ರೀತಿ ಬಂಧನಾನ? ಇಲ್ಲ?

ಅಜ್ಜ – ಯಾವರೀತಿಯ ಬಂಧನ ಅಂತ್ಹೇಳಿ ಅಲ್ಲ? ಆ ಬಂಧನ ಎಂಬುದದು ಆ ಮನಸ್ಸಿಗೆ ತಾಗಬೇಕು. ದೇಹಕ್ಕೆ ಒಂದು ಗಡಿಯಾದರೆ ಅದು ಬಂಧನ ಆಗೋದಿಲ್ಲ. ಉಂ! ಮಾನಸಿಕವಾಗಿ ಒಂದು ಬಂಧನ ಉಂಟು. ಅದು ಬಾಯಲ್ಲಿ ಹೇಳಲಿಕ್ಕಾಗೋದಿಲ್ಲ. ಇನ್ನೊಬ್ಬರ ಹತ್ತಿರ ಹೇಳಲಿಕ್ಕಾಗೋದಿಲ್ಲ. ಅದು ಅವನವನಿಗೇ ಗೊತ್ತುಂಟು. ಮನಸ್ಸಿಗೆ ಒಂದು ಬಂಧನ. ಆ ಬಂಧನಕ್ಕೆ ಕಾರಣ ಯಾವುದು? ಮನಸ್ಸೇ ಕಾರಣ. ಬಂಧನಕ್ಕೆ, ಬಿಡುಗಡೆಗೆ ಕಾರಣ ಯಾವುದು? ಮನಸ್ಸು. ಎಲ್ಲ ಅಲ್ಲಿಯೇ ಉಂಟು. ಈಗ ನೋಡುವಾಗ, ಆ್ಞಂ! ಎಲ್ಲ ಅಲ್ಲಿಯೇ ಉಂಟು. ಪ್ರತಿಯೊಬ್ಬನಲ್ಲಿ ಮನಸ್ಸುಂಟು. ಅದುವೇ ಬಂಧನಕ್ಕೂ ಬಿಡುಗಡೆಗೂ ಕಾರಣ. ಆ ಮನಸ್ಸೆಂದರೆ ಏನೂಂತ ಹೇಳಿ ಶೋಧನೆ ಮಾಡಿಬಿಟ್ರೆ, ಅದನ್ನು ಬಿಡಿಸಿಬಿಟ್ರೆ ಆಯ್ತು. ಕೆಲಸ ಇರೋದಷ್ಟೇ. ಮನಸ್ಸು ಅಂದ್ರೆ ಏನು? ಇದು ಬಿಡಿಸ್ಲಿಕ್ಕೆ ಏನಾಗ್ಬೇಕು. ನಮ್ಮ ನಮ್ಮಲ್ಲಿ ಉಂಟಲ್ಲ ಮನಸ್ಸು? ದೂರ ಎಲ್ಲಿಯೂ ಇಲ್ಲ. ಆ ಮನಸ್ಸನ್ನು ಬಿಡಿಸ್ಲಿಕ್ಕೆ ಬೇಕಾದ ವ್ಯವಸ್ಥೆಗಳೂ ಪೂರ್ಣ ಉಂಟು. ಒಟ್ಟಾರೆ ನಮಗೆ ಬಂಧನ ಪ್ರಾಪ್ತಿ ಆಗ್ಯದೋ ಅಂತ ಹೇಳಿ. ಇದು ಮಾನವನ ಪ್ರಶ್ನೆ.

ಮಾನವನ ಪ್ರಶ್ನೆ ಅಂದ್ರೆ, ಇಡೀ ಮಾನವ ಜನಾಂಗದ ಪ್ರಶ್ನೆ. ಹಾಗಾದರೆ ಯಾರಾದರೂ ಒಬ್ಬನು ಜಗತ್ತಿನಲ್ಲಿ ಬಂಧನಕ್ಕೆ ಒಳಪಟ್ಟವನು ಇರ್ಲೇ ಬೇಕು. ಅವನ ಪ್ರಶ್ನೆ ಇದೀಗ. ಬಿಡುಗಡೆಯ ಪ್ರಶ್ನೆ ಅವನ್ದು, ನಮ್ಮದು ಯಾರದ್ದೂ ಅಲ್ಲ. ನಮಗೆ ಯಾರಿಗೂ ಬಂಧನ ಪ್ರಾಪ್ತಿ ಆಗಿಲ್ಲ. ಆಗಿದ್ದರೆ ನಾವು, ಇಲ್ಲ. ಆ ಬಂಧನಕ್ಕೆ ಒಳಪಟ್ಟವನ ಪ್ರಶ್ನೆ ಇದು. ಮಾನವ ಜನಾಂಗದ ಪೈಕಿ ಒಬ್ಬನ ಪ್ರಶ್ನೆ ಇದೀಗ. ಅವನಿಗೆ ಬಿಡುಗಡೆ ಹೊಂದಬೇಕಾಗಿದೆ. ಅದಕ್ಕೆ ಎಲ್ರೂ ಕೂಡಿ ಒಂದು ಸಮಸ್ಯೆಯನ್ನು ಕಂಡುಹಿಡಿದು, ಆ ಒಬ್ಬನಿಗೆ ನಾವೀಗ ಉತ್ತರ ಕೊಡಬೇಕು. ಏನಪ್ಪ ಹಾಗೆ ಬರ್ತಾ ಉಂಟು ನಮಗೆ ಗೊತ್ತಿಲ್ಲ. ನಾವು ಆಲೋಚನೆ ಮಾಡೋದಿಲ್ಲ. ಎಂಥದೂ ಇಲ್ಲ. ಆ ಮಾತನ್ನ ನೀವೇ ಇಟ್ಟುಕೊಂಡಿರ್ತೀರ ಅಂತ ನಮಗೆ ಕಾಣೋದು ಅದೀಗ. ಆ ಒಬ್ಬನಿಗೆ ಇಡೀ ಜನಾಂಗ ಕೂಡಿ ಈಗ ಉತ್ತರ ಕೊಡ್ಬೇಕು. ಆ ಒಬ್ಬ ಯಾರು ಅಂತ ಕೇಳಿದರೆ ನಾವು ಹೇಳ್ಲಿಕ್ಕೆ ತಯಾರಿದ್ದೇವೆ. ಆದ್ರೆ ಈಗ ಬೇಡ ಅದು.

ಒಬ್ಬರು – ಅದು ಯಾರು?

ಅಜ್ಜ – ಇಲ್ಲಿ ಇದೆ. ಆ ಬಂಧನವನ್ನು ನಾವು ವಹಿಸಿಕೊಂಡಾಯ್ತು. ನಮಗೆ ಉತ್ತರ ಕೊಡಬೇಕಾಗ್ತದೆ ಜನಾಂಗ. ಒಬ್ಬ ಇವನೇ. ಛೆ! ನೀವು ಯಾಕೆ ಹುಡುಕೋದು. ನಿಮ್ಮೆದುರೇ ಇದ್ದಾನೆ. ಇಗೋ ನೋಡಿ. ಗುಬ್ಬಿ ತೆಗೆದು ಇಗೋ ಹಾಕಿ ಉಂಟು ಗುಬ್ಬಿ. ಬಂದಾಗ ಗುಬ್ಬಿ open ಇತ್ತು. ಅವ ಹಾಕಿ ಇದು ನೋಡಿ ಎಲ್ಲ ಮಾಡಿದರು. ಆ್ಞಂ! ಎಲ್ಲ ಅವ ಹೋಗುವವ ಇದ್ದ. ಅದು ಇಡೀ ಬಂಧನ ಇರೋದು. ನೀವೆಲ್ಲರೂ ಕೂಡಿ ಇಡೀ ಜನಾಂಗ ಕೊಡಿ ನಮಗೆ ಉತ್ತರ. ನಮ್ಮನ್ನು ಬಂಧನದಿಂದ ಬಿಡಿಸ್ಬೇಕು. ಆಮೇಲೆ ನಾವು ನೋಡಿಕೊಳ್ತೇವೆ. ಇನ್ನು ಬೇಕಾದರೆ ಉತ್ತರ ನಾವು ಕೊಡ್ತೇವೆ. ನಿಮ್ಮನ್ನು ಬಿಡಿಸ್ಲಿಕ್ಕೆ ನಾವು ತಯಾರು. ಮೊದಲು ನಮ್ಮನ್ನು ಬಿಡಿಸಿ. ಇದೇನು ಮಾತಿನ ಚಮತ್ಕಾರ ಅಲ್ಲ. ಯಾರೂ ಗ್ರಹಿಸಬಹುದು. ನಮ್ಮನ್ನು ನೀವು ಈಗ ಬಂಧನದಿಂದ ಬಿಡುಗಡೆಗೊಳಿಸಿದರೆ, ಆಮೇಲೆ ನಿಮಗೆ ನಾವು ಉತ್ತರ ಹೇಳ್ತದೆ. ಮೊದಲು ನಮ್ಗೆ ಹೊಟ್ಟೆ ತುಂಬ ಬೇಕೀಗ. ನಮಗೆ ಊಟ ಕೊಡಿ. ಮತ್ತೆ ನಿಮಗೆ ಸಾವಿರ ಜನರಿಗೆ ಊಟ ಕೊಡ್ಲಿಕ್ಕೆ ಧೈರ್ಯ ಬರ್ತದೆ. ಆ ಧೈರ್ಯವನ್ನು ತಂದುಕೊಡಿ ಮೊದ್ಲು.

ಒಬ್ಬರು – ೬೨/೪ ಗೆ ನಿಮ್ಮನ್ನು ತೆಗೆದು ಲಕ್ಷ್ಮೀಶ ತೋಳ್ಪಾಡಿಯವರನ್ನು ಹಾಕ್ತೀವಿ.

ಅಜ್ಜ – ಹ್ಹ ಹ್ಹ ಹ್ಹ . . . ನಮ್ಮನ್ನು ಬಿಡಿಸಿಬಿಡಿ. ಅದಲ್ಲ ಬಂಧನ. ಮೊದಲು ಇದು ಹಾಕಿ ಬಿಡಿ, ಗುಬ್ಬಿ ಹಾಕಿದಿರಿ. ನೋಡಿ ಗುಬ್ಬಿ ಹಾಕಿದಿರಿ. ನೋಡಿ ಗಾಳಿ ಬರ್ತಾ ಇರ್ತದೆ. ಇದು ಹಾಕಿದರೆ, ಇದೀಗ, ಗುಬ್ಬಿ ತೆಗೀಬೇಕೀಗ. ಇದು ಹಾಕಿದರೆ, ಇದೀಗ, ಗುಬ್ಬಿ ತೆಗೀಬೇಕೀಗ. ನಾವು ಬರುವಾಗ ಗುಬ್ಬಿ ತೆಕ್ಕೊಂಡಿತ್ತು. ಬಂಧನ ಇಲ್ಲದಾಯ್ತು. ಬಂಧನ ಪ್ರಾಪ್ತಿಯಾಯ್ತಿಲ್ಲಿ. ಇದನ್ನು ಬಿಡಿಸಿ ಈಗ. ಆಮೇಲೆ? ನಾವಿದ್ದೇವೆ. ಈಗ ಅವರಿಗೆ ಹೇಳ್ಬೇಕಲ್ಲ. ಅವರಿನ್ನು ಬರೋದಿಲ್ಲ ಇಲ್ಲಿ. ಗುಬ್ಬಿ ತೆಗೆಯೋದಿಲ್ಲ. ಅದಕ್ಕೆ ನಾವೇ ತೆಗೆದದ್ದು ಗುಬ್ಬಿ. ಈಗ ಬಂಧನವನ್ನು, ಈ ಗುಬ್ಬಿ ನಾವೇ ತೆಗೀಬೇಕು. ಅವರು ಬರೋದಿಲ್ಲ ಇಲ್ಲಿ. ಅವ ಬರೋದೇ ಇಲ್ಲ. ನಮಗೆ ಗಾಳಿ ಸರಿಯಾಗಿ ಬರ್ಬೇಕಾ? ನಾವು ಗುಬ್ಬಿ ತೆಗೀಬೇಕು. ಹಾಗಾದರೆ ನಾವು ಹೇಗೆ ಬಂತೋ ಹಾಗೆ ಇದ್ದೇವೆ. ಆವಾಗ ಬರುವಾಗ, ನೋಡಿ, ಹಾಗೆ. ಇದು ಕೃತಿಯಾಗ್ಬೇಕು ಈಗ ನಮಗೆ. ಪ್ರತಿಯೊಂದು ಕೃತಿ. ನಾವು ಮಾನವರು, ನೀವೂ ಮಾನವರು. ನಾವೆಲ್ರೂ ಮಾನವರಪ್ಪ. ಆ್ಞಂ! ಇಲ್ಲಿ ಒಬ್ಬನಿಗೆ ಬಿಡುಗಡೆ ಹೊಂದಿದವ ಬೇಕು ನಮಗೆ. ಅವನೇ ಅಲ್ಲಿ ಬಿದ್ದುಹೋದ್ರೆ.

ಅಲ್ಲ ಒಬ್ಬನನ್ನು ನಾವು ಸರಿಮಾಡುವ ಆಯ್ತಾ? ನಮ್ಮನ್ನು ಎಲ್ರೂ ಕೂಡಿ ಸರಿಮಾಡಿ. ಗುಬ್ಬಿ ಹಾಕಿ ಸರಿಮಾಡಿದರು ನಮ್ಮನ್ನು ಇವರು ಈಗ. ತೆಗೀಲಿಕ್ಕೆ ಯಾರೂ ಬರೋದಿಲ್ಲ. ನಾವೇ ತೆಕ್ಕೊಳ್ಬೇಕು. ಹಾಗಾದರೆ ಬಂಧನ ಪ್ರಾಪ್ತಿ ಆಯಿತು. ಅಲ್ವ? ಹೊರಗಿಂದ, ಒಳಗಿಂದ ಹೇಗೋ ಒಟ್ಟು ಪ್ರಾಪ್ತಿಯಾಯಿತು. ಅದರ ವಿಚಾರ ನಮಗೆ ಬೇಡ. ಅದನ್ನು ನಿವೃತ್ತಿ ನಾವೇ ಮಾಡಿಕೊಳ್ಳಬೇಕು ಈಗ. ಈಗ ಒಂದು ಗಾಯ ಮಾಡಿ ಹೋಗಿದಾರೆ. ಗುಣಪಡಿಸೋದು ನಾವೇ. ಆ ನೋವನ್ನು ಅನುಭವಿಸೋದು ನಾವೇ. ಅಲ್ವ. ಅವ ಗಾಯ ಮಾಡಿದ್ದು ಮಾತ್ರ. ಅನುಭವಿಸೋದು ನಾವೇ, ಅದಕ್ಕೆ ಮದ್ದು ಮಾಡಿಸಿ. ಅದಕ್ಕೆ ಉದಾಹರಣೆ ಇದು ನೋಡಿ. ಗುಬ್ಬಿ ಹಾಕಿದ್ದು ಅವರು. ನಮಗೆ ಬಂದ್ ಆಯ್ತು ಇಲ್ಲಿ. ಬಂಧನ ಆಯ್ತು. ತೆಗೆಯೋದ್ಯಾರು? ಅವನು ಏನಿದ್ರೂ ಬರೋದಿಲ್ಲ. ಅವ ಗ್ರಹಿಸ್ತಾನೆ ಇದು ಗುಬ್ಬಿ ಹಾಕಿದ್ದು ಒಳ್ಳೇದು ಇವನಿಗೆ ಅಂತ್ಹೇಳಿ. ಆ ಗುಬ್ಬಿ ತೆಗೆದಿದ್ದೇ ಇವನಿಗೆ ಬಂಧನ. ಇದು ಹಾಕಿದ್ದು . . . ನಮ್ಮ ಸ್ಥಿತಿ ಹೀಗೆ ಇಲ್ಲಿ. ಇದೆಲ್ಲ ಯಾವುದಕ್ಕೆ ಕೊಂಡ್ಹೋಗ್ತದೆ ಅಂದ್ರೆ ನಮ್ಮ ಇದಕ್ಕೆ ಕೊಂಡು ಹೋಗ್ತದೆ. ಇದು ವ್ಯವಹಾರವಾದ್ರೆ, ವ್ಯವಹಾರದಲ್ಲಿ ಪಾರಮಾರ್ಥವು ಅಡಗಿ ಉಂಟು ಅಂತ್ಹೇಳಿ. ನಾವು ಪಾರಮಾರ್ಥಿಕ ಹುಡುಕಿಕೊಂಡು ಎಲ್ಲಿಯೂ ಹೋಗುವುದೂ ಬೇಡ. ಕಹಿಯಲ್ಲಿ, ಅಥವ ಚೊಗರಿನಲ್ಲಿ ಸಿಹಿ ಉಂಟು ಅಂತ ನಿನ್ನೆ ಹೇಳಿರಲಿಲ್ವ? ಅದೇ ರೀತಿ ವ್ಯವಹಾರದಲ್ಲಿ, ನಮ್ಮ ನಿತ್ಯ ಜೀವನದಲ್ಲಿ, ಪಾರಮಾರ್ಥಿಕವು ಅಡಗಿ ಉಂಟು. ನಾವು ಶೋಧನೆ ಮಾಡಬೇಕು ಈಗ.

ಯಾರು ಶೋಧನೆ ಮಾಡೋದು? ನಾನು. ನನ್ನನ್ನು ನಾನೇ ಶೋಧನೆ ಮಾಡ್ಬೇಕು. ಅಲ್ಲಿ ನಮಗೆ ಸಿಕ್ತದೆ. ನಿಮಗೆ ಯಾವ್ದು ಬೇಕು, ಅದು ಅಲ್ಲಿ ರೆಡಿಮೇಡಾಗಿ ಉಂಟು. ಹಾಗಾಗಿ ಸಾಧನೆ ಬೇಕು. ಶೋಧನೆಗೆ ಪೂರಕ. ಶೋಧನೆ ಪ್ರಾಮುಖ್ಯ. ಅದಕ್ಕೆ ಪೂರಕ ಸಾಧನೆ ಇರಬಹುದು. ಸಾಧನೆ ದೋಷಯುಕ್ತವಲ್ಲ. ಅದು ಬೇಕು. ಎಲ್ರಿಗೂ ಬೇಕು ಅಂತ್ಹೇಳಿ ಇಲ್ಲ. ಇದ್ರೆ ಒಳ್ಳೇದು. ಹಾಗಾದ್ರೆ ಮನಸ್ಸೆಂದ್ರೆ ಏನು? ನಾವೀಗ ಮೌನಕ್ಕೆ ಹೋಗಬೇಕು. ಮನಸ್ಸೆಂದ್ರೆ ಏನು? ಅಲ್ಲಿ ಬಿಡುಗಡೆ ಆಗ್ಬೇಕು ನಮಗೀಗ, ಇಲ್ಲೀಗ ಅಲ್ವ? ಒಟ್ಟಾರೆ ಬಿಡುಗಡೆ ಆಗ್ಬೇಕು. ಅಲ್ವ? ಸರಿ ಅಲ್ವ ಇದು ಎಲ್ರಿಗೂ? ಏನಾದ್ರೂ ತೊಂದರೆ ಇದೆಯಾ? ಬಿಡುಗಡೆ ಆಗ್ಲಿಕ್ಕೆ ನಮಗೆ ಏನಾಗಿದೆ? ಅದು ಬರಲಿ ನಮಗೆ. ನಮಗೆ ಗುಬ್ಬಿ ಹಾಕಿದ್ರಿಂದ ಈಗ ಬಿಡುಗಡೆ ಆಗ್ಬೇಕು. ನಾವು ಬರುವಾಗ ಗುಬ್ಬಿ ಹಾಕ್ಲಿಲ್ಲ. ನೀವೆಲ್ಲ ನೋಡಿದ್ದೀರಲ್ಲ? ಅವ್ರು ಬಂದು ಹಾಕಿ ಬಿಟ್ರಪ್ಪ. ಅಲ್ಲ ನಾವೇ ಅವ್ರಿಂದ ಹಾಕ್ಸಿದ್ದ್ರೋ ಏನೋ ಇನ್ನು. ಅವ ನೆಪ ಮಾತ್ರ ಇನ್ನು. ಆ್ಞಂ! ಎಲ್ಲರದ್ದೂ ಕಾರಣ ಅವನವ್ನೆ ಎಂಬುದಕ್ಕೆ ಇದೆಲ್ಲ ಉದಾಹರಣೆ ಕೊಡುವುದು, ಇದು ಅಗತ್ಯ ಇಲ್ಲ. ತೆಗೆಯೋದು ನಾವೇ ತೆಗೀತದೆ. ನಮಗೆ ಗಾಳಿ ಬರ್ಬೇಕಲ್ಲ. ಅವ ತೆಗ್ಯೋದಿಲ್ಲ. ಹೇಳಿದರೂ ತೆಗ್ಯೋದಿಲ್ಲ. ಹಾಗಾದ್ರೆ ನಮ್ಮ ಬಂಧನಕ್ಕೆ, ಬಿಡುಗಡೆಯ ದಾರಿಯನ್ನು ನಾವೇ ಹುಡುಕಿಕೊಳ್ಳಬೇಕು. ಬಂಧನಕ್ಕೂ, ಬಿಡುಗಡೆಗೂ ಮನಸ್ಸೇ ಕಾರಣ. ಈಗ ಮನಸ್ಸಂದ್ರೆ ಏನು? ಎಂಬುದನ್ನು ಶೋಧನೆ ಮಾಡುವಾಗ ನೀವು ಬಿಡುಗಡೆ ಹೊಂದುತ್ತೀರಿ. ನೀವು ಅಂದ್ರೆ ನಾವು. ಓ! ಒಟ್ಟು. ಆಗ ಮನಸ್ಸು ಮನಸ್ಸನ್ನೇ ಶೋಧನೆ ಮಾಡ್ಲಿ. ನಾನು ನನ್ನನ್ನೇ ಶೋಧನೆ ಮಾಡುವಂಥಾದ್ದು. ಬೇರೆ ಯಾರೂ ಅಲ್ಲಿಗೆ ಬರೋದಿಲ್ಲ. ಇದು ಎಲ್ಲರಿಗೂ ಗೊತ್ತಿದ್ದ ವಿಚಾರ. ಎಲ್ರಿಗೂ ಗೊತ್ತುಂಟು ಇದು. ಆದರೆ ಅವರಿಗೆ ಆ ಶೋಧನೆ ಮಾಡುವಂಥ ಪ್ರಸಂಗ ಬರ್ಲಿಲ್ಲ. ಅಷ್ಟೇ ತೊಂದರೆ ಈಗ. ಇದೆಲ್ಲ ಅಂತರ್ವಿಚಾರಕ್ಕೆ ಸಂಬಂಧಪಟ್ಟದ್ದು, ಬಾಹ್ಯವಿಚಾರಕ್ಕೆ ಒಂದೂ ಅಲ್ಲ. ಏನು ಎತ್ತಿಕೊಡಿ. ಎತ್ತಿಕೊಡಿ. ಏನು ವಿಚಾರ? ಯಾವುದು ನಮಗೆ ಬೇಕಾದ್ದು ಈಗ ಅಂತ.

ಒಬ್ಬರು – ಶೋಧನೆ ಮಾಡುವಂಥದ್ದು. ಮೌನಕ್ಕೆ ಹೋಗುವಂಥದ್ದು.

ಅಜ್ಜ – ಒಟ್ಟಾರೆ ನಮಗೆ ಬೇಕಾದ್ದು ಮನಸ್ಸಿನ ಮೌನ ನಮಗೆ ಯಾಕೆ? ನಾವು ಕೇಳ್ತದೆ ಏನು ಇದಾಡಬೇಡಿ. ಯಾಕೆ? ಒಟ್ಟಾರೆ ನಮಗೆ ಬೇಕಾದ್ದು ಯಾವುದು? ಒಂದೇ ಒಂದು ಜೀವಂತ ಪ್ರಶ್ನೆಯಾಗಿ ಯಾವುದು? ಬಿಡುಗಡೆ, ತೃಪ್ತಿ, ನೆಮ್ಮದಿ, ಶಾಂತಿ, ಇದೇ ನಮಗೆ ಬೇಕಾದ್ದು ಈಗ ಅಲ್ವ? ಇದಕ್ಕೆಲ್ಲದಕ್ಕೂ ಕಾರಣ ಮನಸ್ಸು. ಆದ್ದರಿಂದ ಮನಸ್ಸನ್ನು ಕೇಂದ್ರೀಕರಿಸುವಂಥದ್ದು ನೋಡಿ. ಅದನ್ನು ಇದು ಮಾಡುವಂಥದ್ದು ಅಂದ್ರೆ ಹಾಗೆ. ಮುಖ್ಯ ಬೇಕಾದ್ದು ನಮಗೆ . . . ಬಿಡುಗಡೆ ಮುಖ್ಯ ನಮಗೆ. ಯಾವುದರಿಂದ? ಬಂಧನದಿಂದ. ಬಂಧನವು . . ಅದ್ಕೇ ನಾವು ಕೇಳೋದು ಬಂಧನವು ಉಂಟೇ ಈಗ ಅಂತ. ಇದ್ರೆ ತಪ್ಪೋದು ಉಂಟು. ಔಷಧಿ ಹಾಳಾಗ್ತದೆ ಇಲ್ದೆ ಹೋದ್ರೆ. ಯಾರಿಗಾದರೂ ಬಂಧನ ಇದ್ರೆ ಔಷಧಿಯನ್ನು – ಅದು ಬರ್ತದೆ. ಆ್ಞಂ! ಕಂಪೆನಿಯಿಂದ. ಇದು ನಮಗೆ ಇದು – ಶಾಂತಿ ಬೇಕು ಅಂತ ಹೇಳಿ. ಏನು ಅಶಾಂತಿ ನಮಗೆ ಸಂಭವಿಸಿದೆ? ಅದು ದಾರಿಗಳಾಯ್ತು. ಆ ಬಿಡುಗಡೆ ಎಂಬ ಪ್ರಶ್ನೆಯು – ಇದೆಲ್ಲ ದಾರಿಗಳು ಮತ್ತೆ. ಈ ಮನಸ್ಸನ್ನು ಕೇಂದ್ರೀಕರಿಸುವುದು ಎಲ್ಲಿ, ಪ್ರತಿಯೊಂದೂ ದಾರಿಗಳು. ಮೊದ್ಲು ಅದು ನಮ್ಗೆ ಈಗ ಬೇಕಾದ್ದು. ಅದು ಇದ್ರೆ ಅದು ಸಂಭವಿಸಿದವನಿಗೆ. ಅವನಿಂದ್ಲೇ ಆ ದಾರಿಯನ್ನು ನಾವು ಅವ ಮಾಡುವ. ಅವನೇ ಅದನ್ನು ಕಂಡುಕೊಂಡು, ಎಲ್ಲ ಉಂಟಲ್ಲ ಅಲ್ಲಿ. ಪ್ರತಿಯೊಬ್ಬನಲ್ಲಿ ಅದು ಉಂಟು. ಸಂಭವಿಸಿದಾಗ, ಅವನು ಅವನನ್ನೇ ಅಲ್ಲಿ ನೋಡಿದಾಗ, ಎಲ್ಲ ಸಮಸ್ಯೆಗಳೂ ನಿವೃತ್ತಿ ಸಂಭವಿಸಬೇಕು. ಫಸ್ಟ್ ಇರೋದು ಅಲ್ಲಿ. ಮೊದ್ಲಾಗೋದಿಲ್ಲ. ಈಗ ನಾವು ಧ್ಯಾನ ಮಾಡ್ತೇವೆ ಅಲ್ಲವ? ಮೌನದಿಂದ ಇರ್ತೇವೆ. ಎಲ್ಲ ಸಾಧನೆಗಳು ಯಾಕಾಗಿ? ಒಟ್ಟು ಸಮಸ್ಯೆ ಏನು? ಈಗ ಧ್ಯಾನ – ಯಾಕೆ ಧ್ಯಾನ? ಯಾಕಾಗಿ? ಬಿಡುಗಡೆಗೋಸ್ಕರ. ಅಲ್ಲವ? ಹಾಗಾದರೆ ಬಂಧನ ಎಂಬುದು ಸ್ವಾಭಾವಿಕ ಉಂಟದು. ಒಳಗೆ ಉಂಟು. ನಾವು ಜನ್ಮಕ್ಕೆ ಬರುವಾಗಲೇ ಬಂಧನ ಇದೆ. ಅದ್ರಿಂದ ನಾವು ಈಗ ಬಿಡುಗಡೆ ಆಗ್ಬೇಕು. ಅಲ್ಲವ? ಆ ಬಂಧನಕ್ಕೆ ಒಳಪಟ್ಟವನು ಇದು ವಿಮರ್ಶೆ ಆಯ್ತು ನೋಡಿ, ಆ ಬಂಧನಕ್ಕೆ ಒಳಪಟ್ಟವನು ತನ್ನ ಅಸ್ತಿತ್ವವನ್ನು ಕಳಕೊಂಡಾಗ, ಯಾರಿಗೆ ಬಂಧನ ಅಲ್ಲಿ? ನೋಡಿ. ಅವ್ರು ಏನೋ ಬರೀತಿದ್ದಾರೆ. ದೊಡ್ಡ ಸಮಸ್ಯೆ ಆಗಿಬಿಟ್ಟಿತು ಈಗ. ಬಂಧನಕ್ಕೆ ಒಳಪಟ್ಟವನು, ತನ್ನ ಅಸ್ತಿತ್ವವನ್ನು ಕಳಕೊಳ್ಳದೆ ಬಿಡುಗಡೆ ಇಲ್ಲ. ಅಸ್ತಿತ್ವವನ್ನು ಕಳಕೊಂಡ ಮೇಲೆ ಮತ್ತೆ ಅಲ್ಲೇನುಂಟು? ಆ್ಞಂ! ಮುಗೀತಲ್ಲ. ಇದಕ್ಕೆ ಯಾರಾದ್ರೂ ತಯಾರಿದ್ದಾರಾ ಈಗ? ಬಿಡುಗಡೆ ಅಂತ ಹೇಳ್ತಾರೆ. ಫಿನ್ ಪಾಯಿಂಟಿಗೆ ಬರುವಾಗ ಯಾರಾದ್ರೂ . . . .

ಒಬ್ಬರು – ಆದ್ರೆ ಅಸ್ತಿತ್ವ ಕಳಕೊಳ್ಳಲಿಕ್ಕೆ ಹೆದರಿಕೆ ಇದೆಯಲ್ಲ ಅಜ್ಜ.

ಅಜ್ಜ – ಹೌದು. ನಮಗೆ ಭಯ ಇಲ್ಲದ ಸ್ಥಿತಿ ಬೇಕಲ್ಲ ಈಗ. ಬಿಡುಗಡೆ ಅಂದ್ರೆ ಅಲ್ಲಿ ಭಯ ಇಲ್ಲ. ಅಲ್ಲಿಗೆ ಹೋಗ್ಬೇಕಾದ್ರೆ ನಾವು ಭಯವನ್ನು ದಾಟ್ಬೇಕೀಗ. ದ್ವಂದ್ವದಲ್ಲಿ ಯಾವಾಗ್ಲೂ ಭಯ ಉಂಟು. ದ್ವಂದ್ವಾತೀತಕೆ ನಾವು

ಹೋಗ್ಬೇಕಲ್ಲ? ಅಲ್ಲ ಬೇಡ? ಅಲ್ಲಿ ಎಲ್ಲುಂಟು? ಈ ಸಾವು . . ನೋಡಿ . . ಅದೆಲ್ಲ ಮತ್ತೆ ಬರ್ತದೆ ಹಾಗೆ. ದ್ವಂದ್ವ ಎಂದರೆ ಜನನ, ಮರಣ ಇದು ದ್ವಂದ್ವ. ಇದು ಯಾವಾಗ್ಲೂ ಬಂಧನವೇ ಅಲ್ವ? ಅದೇ ಕೆಲಸ, ಯಾವಾಗ್ಲೂ ಅದೇ ಕೆಲಸ, ಬರೋದು ಹೋಗೋದು. ಇದು ಉದಾಸೀನ ಹಿಡಿದವರಿಗೆ ಇದು ಹೇಳ್ತದೆ ಈಗ, ಉದಾಸೀನ ಅಂದ್ರೆ ಒಟ್ಟಾರೆ ಅಲ್ಲಿ ಬಂಧನ ಅಂತ ಗೊತ್ತಾದ್ಮೇಲೆ, ನೋಡಿ ಅವ ಬಿಡುಗಡೆಗೆ ಹೋಗ್ತಾನೆ. ದಾರೆ ಕಾಣ್ತಾನೆ ಅಲ್ಲಿ. ಮೊದ್ಲು ನಮಗೆ ಬಂಧನ ಅಂತ ಹೇಳಿ ಗೊತ್ತಾಗ್ಬೇಕು. ಅವ ಶೋಧನೆ ಮಾಡ್ತಾನೆ. ಏನು ಕಾರಣ ಅಂತ. ಓ! ಆಯ್ತು ಅಲ್ಲೇ ಹಾಗಾದರೆ ನಮಗೆ ಬದುಕಬೇಕು ಅಂತ್ಹೇಳಿ ಉಂಟು. ಪ್ರತಿಯೊಬ್ಬರಿಗೂ ಅಲ್ವ? ಉಂಟೋ ಇಲ್ವೋ. ಬಂಧನವಿಲ್ಲದ ಬದುಕಾಗಬೇಕು ನಮಗೆ. ನೆಮ್ಮದಿ ಇರುವ ಬದುಕಾಗಬೇಕು. ಎಲ್ರೂ ಪ್ರಯತ್ನ ಮಾಡಿ ನೋಡಿ ಈಗ ಸರಿ ಬಂತು. ಈಗ ನಮಗೆ ಬದುಕು ಬೇಕು, ನೆಮ್ಮದಿ ಇರುವ ಬದುಕು, ಶಾಂತಿ ಇರುವ ಬದುಕಾಗಬೇಕು. ಏನೊಂದೂ ತೊಂದರೆ ಇಲ್ಲದ ಬದುಕು ನಮಗೆ ಇಲ್ಲಿ ಬೇಕು. ಅಲ್ಲವ? ಹಾಗಾದರೆ ಇದರಲ್ಲಿ ತೊಂದರೆಗಳುಂಟು. ದ್ವಂದ್ವದಲ್ಲಿ – ಅಲ್ಲಿ ಗೊಂದಲ ಉಂಟು. ಅಲ್ಲವ? ಹಾಗಾದರೆ ಗೊಂದಲವಿಲ್ಲದ, ನೆಮ್ಮದಿ ಇರುವ ಬದುಕು ನಮಗೆ ಬೇಕು ಅಂತ ಹೇಳಿ ಇದ್ದರೆ, ಆಚೆಗೆ ದಾಟಬೇಕು, ದ್ವಂದ್ವಾತೀತಕ್ಕೆ ಹೋಗಬೇಕು. ಆದ್ರೆ ಇಲ್ಲಿ ದ್ವಂದ್ವ. ಎರಡುಂಟು. ಅದನ್ನು ಒಂದನ್ನು ನಾವು ಏನು ಮಾಡಬೇಕು. ಅದನ್ನು ಬಿಡಿಸಬೇಕಲ್ಲ. ಆ ಒಂದು ಯಾವುದು? ಅದುವೇ ನಾನು. ಆ್ಞಂ! ಅದು ಬಿಡಿಸಲು ಅಲ್ಲಿ ನೀನು ಅಂತ ಉಂಟಂತೆ ಮತ್ತೆ ಅಪ್ಪ. ಇದು ಒಂದು ಹೋಗಲಿ. ಅದು ಮತ್ತೆ ಸುಲಭ. ಅದಕ್ಕೆಲ್ಲ ವ್ಯವಸ್ಥೆ ಉಂಟು. ಹಾಗಾದ್ರೆ ನಾನೂ ಇಲ್ಲ, ನೀನು ಇಲ್ಲದ ಸ್ಥಿತಿ ಉಂಟು. ಅದುವೇ ದ್ವಂದ್ವಾತೀತವಾದ ಬದುಕು. ಅದುವೇ ಜೀವಾತ್ಮನ ಗುರಿ. ಆ ಗುರಿಯನ್ನು ತಲುಪಲು ನಮಗೀಗ ದಾರಿ ಬೇಕು ಅಲ್ವ? ಅದು ಸುಲಭ ಆಗ್ಬೇಕಂತೆ. ಸುಲಭದ ದಾರಿ. ಕಷ್ಟಕ್ಕೆ ನಾವು ತಯಾರಿಲ್ಲ. ಆ್ಞಂ! ಕಷ್ಟಕ್ಕೆ ತಯಾರಿಲ್ಲ ನಾವು. ಬಟ್ಟೆ ಒಳ್ಳೇದಾಗ್ಬೇಕು. ಕ್ರಯ ಕಮ್ಮಿ ಆಗ್ಬೇಕು. ಮಾಲು ಉಂಟು, ಕ್ರಯ ಕಮ್ಮಿ. ಅತಿ ಸುಲಭದಲ್ಲಿ ನಮಗಾಗ್ಬೇಕಂತೆ. ಕಷ್ಟ ಪಡ್ಲಿಕ್ಕೆ ನಮ್ಗೆ ಪುರುಸೊತ್ತೂ ಇಲ್ಲ ಅದು ಆಗೋದೂ ಇಲ್ಲ. ಅದು ನಮಗೆ ಬೇಡ. ಸುಲಭ. ಈಗ ಅದು ಸಾಧ್ಯವೋ ಅಂತ್ಹೇಳಿ. ಹೌದು ಸಾಧ್ಯ. ಯಾರಿಗೆ ಬೇಕು? ಸಾಧ್ಯ ಹೌದು. ಉಂಟು ದಾರಿ ಉಂಟು. ಯಾವ್ದು ದಾರಿ ಉಂಟು. ಅಲ್ವ. ನಾವು ಹೋಗ್ಲಿಕ್ಕೆ ತಯಾರಿದ್ದೇವೋ ಅಂತ ಹೇಳಿ ಲೆಕ್ಕ ನಮಗೆ ಬೇಕಾದ್ದು. ತಯಾರಿದ್ದೇವೆ. ತಕ್ಕ ಸನ್ನಿವೇಶ ನಮಗೆ ಬರ್ಲಿಲ್ಲ. ಸನ್ನಿವೇಶ ನಮಗೆ ಬರ್ಲಿಲ್ಲ. ಹಾಗಾದರೆ ನಾವು ಅತಿ ಸಮಾಧಾನದಿಂದ ನೆಮ್ಮದಿಯಿಂದ ಮೌನದಿಂದ ಅಂಥದ್ದನ್ನು ಕಾಯಬೇಕಾಗ್ತದೆ. ಹೊರತು ಬೇರೆ ಇದಕ್ಕೆ ಅವನವನಲ್ಲಿ ಕಂಡುಕೊಳ್ಳುವಂಥ ಒಂದು ಸಮಸ್ಯೆ ಇದು. ಇದು ಮಾನವನ ಪ್ರಶ್ನೆ. ಆ್ಞಂ! ಮಾನವನ ಪ್ರಶ್ನೆ. ಬಂಧನಕ್ಕೆ ಒಳಪಟ್ಟವನಿಗೆ ಹಾಗೆ ಬಂಧನಕ್ಕೆ ಒಳಪಟ್ಟವರು ಇಲ್ಲಿ ಕೂಡಿದವರಲ್ಲಿ ಯಾರಾದರೂ ಇದ್ದರೆ ಅವರಿಗೂ ಅನ್ವಯಿಸುತ್ತದೆ. ಇಲ್ಲವಾದರೆ ಇಲ್ಲಿ ಯಾರಿಗೂ ಅದು ಅನ್ವಯಿಸುವುದಿಲ್ಲ. ಬಂಧನಕ್ಕೊಳಪಟ್ಟವನಿಗೆ ಅಂದರೆ ನಮಗೆ ಅನ್ವಯಿಸ್ತದೆ. ಇದೀಗ. ನಾವು ಬಂಧನ ಸಹಿಸಿಕೊಂಡಿದ್ದೇವೆ. ಮೊನ್ನೆ ತೃಪ್ತಿ ಉಂಟು ಅಂತ ನಾವು ಹೇಳಿಯಾಯ್ತು. ಆ್ಞಂ! ಈಗ ಅದನ್ನು ನಾವು ವಹಿಸಿಕೊಂಡಾಯ್ತು. ಒಟ್ಟು ಆ ಸಮಸ್ಯೆಯನ್ನು ಈಗ ನಮಗೆ ಬಿಡುಗಡೆ ಆಗ್ಬೇಕು. ನೀವೆಲ್ರೂ ಕೂಡಿ ಒಂದು ದಾರಿಯನ್ನು ಹುಡುಕುವ ನೋಡುವ. ಒಬ್ಬನಿಗೆ ಅದರಿಂದ ಬಿಡಿಸಿಕೊಳ್ಳಲಿಕ್ಕೆ ಕಷ್ಟ ಅದು. ಹತ್ತು ಜನರಿಗೆ ಇದು ಮಾಡ್ಲಿಕ್ಕೆ. ಹತ್ತು ಜನರೂ ಕೂಡಿದರೆ ಒಬ್ಬನನ್ನು ಹೇಗೂ ಮೇಲೆ ಎತ್ತಿ ಹಾಕ್ಬಹುದು. ಅಲ್ಲ? ಈಗ ಬಾವಿಗೆ ಬಿದ್ದು ಹೋದ ಒಬ್ಬ. ಹತ್ತು ಜನ್ರು ಕೂಡಿದರೆ ಏನಾಗ್ಬೇಕ್ಹೇಳಿ. ಕ್ಷಣಮಾತ್ರದಲ್ಲಿ ಮೇಲೆ ಬರ್ಲಿಕ್ಕೆ ಸಾಧ್ಯ ಇಲ್ವ? ಪ್ರಯತ್ನ ಮಾಡಿದರೆ. ಆ ಒಬ್ಬ ಮೇಲೆ ಬಂದಾಗ ಅವನು ನೋಡಿ ಮತ್ತೆ ಹೇಳ್ತಾನೆ, ಎಲ್ರಿಗೂ ಉತ್ತರ. ಅವನಿಗೆ ಗೊತ್ತಿಲ್ಲ ಇಲ್ಲಿ ಏನೆಲ್ಲ ಆಗಿದೆ ಅಂತ. ಎಲ್ಲ ವಿವರಣೆ ನಾವು ಕೊಡ್ತದೆ. ಒಬ್ಬನನ್ನು ಎತ್ತುವ ಪ್ರಯತ್ನ ನಾವು ಮಾಡ್ಬೇಕು ಈಗ. ಮಾನವ ಜನಾಂಗದ ಪೈಕಿಯಲ್ಲಿ ಒಬ್ಬನನ್ನು, ಆ ಪೈಕಿ ನಾವು ವಹಿಸಿಕೊಳ್ತೇವೆ. ಬಂಧನ ಪ್ರಾಪ್ತಿಯಾಯ್ತು ನಮಗೆ. ನೋಡಿ ಗುಬ್ಬಿ ಬಿತ್ತಿಲ್ಲಿ ಈಗ. ಒಳಗೆ ಗಾಳಿ ಬರೋದಿಲ್ಲ. ತೆಗೀಲಿಕ್ಕೆ ನಾವೇ ತೆಗೀಬೇಕಷ್ಟೆ ಇನ್ನು. ಹಾಗಾದರೆ ಬಂಧನದ ಮೂಲವನ್ನು ಶೋಧನೆ ಮಾಡಿದಾಗ ಬಿಡುಗಡೆ ಅಲ್ಲಿ ಉಂಟು. ಬಂಧನದ ಮೂಲದಲ್ಲೇ ಬಿಡುಗಡೆ ಉಂಟು. ಇದು ಏನು ದಾರಿ ಈಗ. ನಾವು ವ್ಯವಹಾರವೇ ಪಾರಮಾರ್ಥಿಕ ಎಂಬ ದಾರಿಯಿಂದ ಈಗ ಹೋಗಬೇಕಾಗಿದೆ. ಪಾರಮಾರ್ಥಿಕ ಎಂಬುದೊಂದು ಉಂಟು, ಆಧ್ಯಾತ್ಮಿಕ ಎಂಬುದೊಂದು ಉಂಟು ಎಂಬ ಭಾವನೆಯಿಂದಲೇ ನಮಗೆ ಈಗ ಗೊಂದಲ ಉಂಟಾಗಿದೆ. ನಾವು ದೊಡ್ಡ ದೊಡ್ಡ ಹೆಸರು, ಆತ್ಮ, ಪರಮಾತ್ಮ, ಏನೆಲ್ಲ ಎಲ್ರಿಗೂ ಗೊತ್ತುಂಟೀಗ. ಅದೇ ಗೊಂದಲ ನಮಗೆ ಮಾಡಿದ್ದು. ಈಗ ಗೊಂದಲ ನಮಗೆ ಮಾಡಿದ್ದು ಅದು. ಪರಮಾತ್ಮ ಇದ್ದಾನಂತೆ. ಎಲ್ಲಿ? ಯಾರಿಗೆ ಗೊತ್ತಿದೆ? ಯಾರಿಗೂ ಗೊತ್ತಿಲ್ಲ. ಆದ್ರೂ ಹೇಳ್ತಾನೆ ಅವ. ಹಾಗಾದ್ರೆ ಇದ್ದಾನೆ ಅವ. ಎಲ್ಲಿದ್ದಾನೆ? ಒಳಗೇ ಇದ್ದಾನೆ. ಅದಕ್ಕೇ ಶೋಧನೆ ಅಂತ ಹೇಳೋದು. ನೋಡಿ ಅಂತ ಹೇಳಿ. ಆದ್ರೆ ನಮಗೆ ಪುರುಸೊತ್ತಿಲ್ಲ. ಒಂದೇ ಹೇಳೋದು ನಾವು. ಯಾರಿಗೂ ಪುರುಸೊತ್ತಿಲ್ಲ. ಅಂದ್ರೆ ಗೊಂದಲದಲ್ಲಿ ನಾವು ಬಿದ್ದು ಹೋಗಿದ್ದೇವೆ. ಆದ್ದರಿಂದ ಪುರುಸೊತ್ತಿಲ್ಲದವರು ದಿವಸದಲ್ಲಿ ೫ ನಿಮಿಷ ಸಾಕಪ್ಪ, ಧ್ಯಾನ, ಮೌನದಿಂದ ಧ್ಯಾನ ೫ ನಿಮಿಷ. ಇದು ಯಾವಾಗ? ನೋಡಿ ಹೆಚ್ಚಾಗಿ ಪುರುಸೊತ್ತಿರುವಂತಹ ಒಂದು ಸಮಯ ಯಾವುದಂದ್ರೆ ಸಾಧಾರಣ ಸಾಯಂಕಾಲ ೭ ಗಂಟೆಗೆ. ಎಲ್ಲ ವಹಿವಾಟು ಕೆಲಸದವರಿಗೆ ೮ ಗಂಟೆ, ೯ ಗಂಟೆಗೆ ಎಲ್ಲ ಹೊರಡಲಿಕ್ಕಾಯ್ತು. ೬ ಗಂಟೆಗೆ ಅವರಿಗೆ ಧ್ಯಾನ ಮಾಡ್ಲಿಕ್ಕೆ ಆಗೋದಿಲ್ಲ. ಏನಾಗ್ತದೆ? ಹೊರಡುವ ಇದೇ ಆಯ್ತು. ಅಲ್ವ? ಪುರುಸೊತ್ತಿಲ್ಲ. ೫

ಗಂಟೆ, ೪ ಗಂಟೆಗೆ ಎಲ್ಲ ಬಿಡುಗಡೆ ಆಯ್ತು. ಆಫೀಸಿನಲ್ಲಿದ್ದವರಿಗೂ ಅದು ಇದು ಎಲ್ಲ. ಆ ಸಮಯದಲ್ಲಿ ನೋಡಿ ಇದು ಹೆಚ್ಚಾಗಿ, ಇದು ಯಾರಿಗೂ ವ್ಯಕ್ತಿಗೆ ಅನ್ವಯಿಸುವುದಲ್ಲ. ಆ ಪುರುಸೊತ್ತಿನ ಸಮಯದಲ್ಲಿ, ಸಿನಿಮ ಥಿಯೇಟರಿಗೆ ಹೋಗುವವರಿದ್ದಾರೆ, ಇನ್ನು ಕ್ಲಬ್ಬಿಗೆ ಹೋಗ್ತಾರೆ. ಎಲ್ಲ ಇದ್ದಾರೆ. ಅದು ಅಲ್ಲೇನು ಇದಿಲ್ಲ. ಆ ಸಮಯವನ್ನು ಇದಕ್ಕೆ ತೆಗೆದುಕೊಂಡು, ಅವರವರು ಇದ್ದ ಸ್ಥಳದಲ್ಲೇ ಅವರವರ ಮನೆಯಲ್ಲೇ ಕುಳಿತುಕೊಂಡು ಯಾವುದೊಂದೂ ಉದ್ದಿಶ್ಯವಿಲ್ಲದೆ, ಅಪ್ಪ ಏನು? ಇದು ಯಾರು? ಅಷ್ಟೇ ನಮಗೆ ಬೇಕಾದ್ದು. ಇದು ಎಂಥದು? ಇದು ಯಾರ ಪ್ರಶ್ನೆ? (ನಾನು) ನನ್ನದು. ಅದು ಯಾರು? ಆ ಪ್ರಶ್ನೆ ಹಾಕುವವ ಯಾರೀಗ? ಅದು ಮನಸ್ಸು ಪ್ರಶ್ನೆ ಹಾಕ್ತದೆ. ಗೊಂದಲಕ್ಕೆ ಒಳಪಡಿಸಿದ್ದೂ ಅದೇ. ಪ್ರಶ್ನೆ ಹಾಕೋದು, ಎಲ್ಲ ಅದರ ಕೆಲಸವೇ. ಈ ಮನಸ್ಸಿನ ಕೆಲಸ. ನಿಜವಾಗಿ ನೋಡಿದರೆ ಮನಸ್ಸಿಗೆ ಅಸ್ತಿತ್ವವೆಂಬುದೇ ಇಲ್ಲ. ಹಾಗಾದರೆ ಭಾವಿಸುವಂಥಾದ್ದೇ ಮನಸ್ಸು. ಭಾವಿಸ್ತದೆ ಅದು ಹಾಗೆ, ಇದು ಹೀಗೆ, ಅಷ್ಟೇ. ಆ ಭಾವನೆಯನ್ನು ಬಿಟ್ಟಾಗ ಏನಾಯ್ತಲ್ಲಿ? ಒಂದೊಂದೇ ದಾರಿ ಸಿಕ್ಲಿಕ್ಕೆ ಪ್ರಾರಂಭ ಆಯ್ತು. ಈ ಪ್ರಕೃತಿಯೆಂಬುದೇ ಒಂದು ಗೊಂದಲ ಅಲ್ವ? ಅ್ಞಂ! ಹಾಗಾದರೆ ಗೊಂದಲದಿಂದ ಬಿಡುಗಡೆ ಹೊಂದಬೇಕು ಅಂತ ನಾವು ಅಪೇಕ್ಷೆ ಪಡುವಂಥಾದ್ದು ಒಂದು ಪ್ರಕೃತಿಗೆ ವಿರೋಧವಲ್ಲ ಅದು? ಅದು ಪ್ರಕೃತಿಗೆ ವಿರೋಧ ಅಲ್ವ? ವಿರೋಧವಲ್ಲ. ನಾವು ಪ್ರಕೃತಿಯಿಂದ ಆಚೆಗೆ ಹೋಗ್ಬೇಕೀಗ. ನಾವು ಆಚೆಯಿಂದ ಬಂದವರು. ಇಲ್ಲಿ ಬಂದು ನಾವು ಇದಕ್ಕೆ ಒಳಪಟ್ಟಿದ್ದು. – – – ಈಗ ಆಚೆಗೆ ಹೋಗ್ಬೇಕು. ನಮಗೆ ದಾರಿ ಸಿಕ್ಕೋದಿಲ್ಲ. ಅದಕ್ಕೆ ಉಪನಿಷತ್‌ನಲ್ಲಿ ಏನೋ ಒಂದು ಶ್ಲೋಕ ಹೇಳಿದ್ದಾರಂತೆ. ಯಾರೋ ಹೇಳಿದ್ದು. ನಾವದನ್ನು ಇಲ್ಲಿ ಉಪಯೋಗಿಸೋದಿಲ್ಲ. ಯಾರಾದರೂ ಇದ್ದರೆ, ಗೊತ್ತಿದ್ದವರಿದ್ದರೆ ಹೇಳಿ. ಅದು ಯಾವುದೋ ಒಂದು ಪದ್ಯದಲ್ಲಿ ಬಂತಪ್ಪ ಇವತ್ತು. 'ಮೃತ್ಯುವಿನಿಂದ ಅಮೃತತ್ವಕ್ಕೆ ನನ್ನನ್ನು ಕೊಂಡುಹೋಗು' ಅಂತ ಹೇಳ್ತಾನೆ ಅವ ಇಲ್ಲಿ. ಮೃತ್ಯು ಅಂತ ಹೇಳುವಾಗ ನಾವು ಭಯ ಪಡ್ತೇವೆ. ಮತ್ತೆ ಕೊಂಡು ಹೋಗು. ಇನ್ನು ಹೆದರಿಕೆ ಆಗೋದಿಲ್ಲ. ಕೊಂಡುಹೋಗು ಇದರಿಂದಾಚೆಗೆ. ಮೃತ್ಯುವಿನಿಂದ ನನ್ನನ್ನು ಅಮೃತತ್ವಕ್ಕೆ ಕೊಂಡುಹೋಗು. ಹಾಗಾದರೆ ಅಮೃತತ್ವ ಉಂಟು ಅಂತ ಅವನಿಗೆ ಗೊತ್ತುಂಟು. ಯಾಕೆಂದ್ರೆ ಅವನು ಅಲ್ಲಿಂದ್ಲೇ ಇಲ್ಲಿ ಬಂದದ್ದು. ಇಲ್ಲಿ ಮೃತ್ಯುವಿಗೆ ಒಳಪಟ್ಟ. ಅ್ಞಂ! ಇಲ್ಲಿ ಒಳಪಟ್ಟ. ಯಾವುದೋ ಒಂದು ಕಾರಣದಿಂದ ಅಂತ ತಿಳ್ಕೊಳ್ಳುವ. ಈಗ ಕೊಂಡುಹೋಗ್ಲಿಕ್ಕೆ ಯಾರು ಬರ್ತಾರೆ? ಯಾರೂ ಬರೋದಿಲ್ಲ. ಗುಬ್ಬಿ ನಾವೇ ತೆಗೀಬೇಕಷ್ಟೆ. ಯಾರೂ ಬರೋದಿಲ್ಲ. ಅವ ಕರೆದರೆ ಬರೋದಿಲ್ಲ. ಇದಕ್ಕೆ ದಾರಿ ಏನು? ಅವನವನ ಯಾವುದೋ ಒಂದು ಇಷ್ಟಕ್ಕೆ ಅವನಲ್ಲಿಯೇ ಅವನು ಕಂಡುಕೊಳ್ಳಬೇಕು. ಆ ಕಂಡುಕೊಳ್ಳುವ ದಾರಿಗೆ ಇಳಿದಾಗ ಅಲ್ಲಿಯೇ ಮೌನವು ಪ್ರಾರಂಭವಾಗ್ತದೆ. ಅಷ್ಟರವರೆಗೂ ಮೌನ ಅಂತ ಹೆಸರು ಹೊರತು ಆಗೋದೇ ಇಲ್ಲ. ಮೌನಕ್ಕೆ ಕೂತಾಗ ಮತ್ತೂ ಗೊಂದಲಗಳು ಅಲ್ಲಿ ಬರ್ತವೆ. ಅಪ್ಪ ಅದು ಏನೆಲ್ಲ ಬರ್ತದೆ ಮೌನಕ್ಕೆ ಕೂತಾಗ, ಧ್ಯಾನಕ್ಕೆ ಕೂತಾಗ, ಗೊಂದಲಗಳು ಬರ್ತದೆ. ಏನು ಒಂದು ಮರೆತುಹೋಯ್ತು. ಸ್ವಲ್ಪ ನೆನಪು ಮಾಡಿ. ನೆನಪು ಬರೋದಿಲ್ಲ. ನೆನಪು ಅಂದ್ರೆ ಅದೇನು stock ಇಲ್ಲ ನೋಡಿ. ಮರೆತು ಹೋಯ್ತು, ಆ ಮಾತು ಮರೆತೇ ಹೋಯ್ತು. ನೆನಪು ಬರೋದಿಲ್ಲ. ಈಗ ಅದು ಬೇಕು ನಮಗೆ. ಈಗ ಒಂದು ಸೆಕೆಂಡಿಗೆ ಮೊದಲು ಹೇಳಿದ ಮಾತು.

ಒಬ್ಬರು – ಮೃತ್ಯುವಿನಿಂದ . . . .

ಅಜ್ಜ – ಹೌದು . . ಹೌದು . . ಧ್ಯಾನಕ್ಕೆ ಕೂತಾಗ ಹಲವಾರು ಅದು ಬರ್ತದೆ. ಬರೋದಿಲ್ವ? ಅ್ಞಂ! ಇದಕ್ಕೆ ಕಾರಣ ಏನು? ನಾನು ಧ್ಯಾನಕ್ಕೆ ಕೂತಿದ್ದೇನೆ ಎಂಬ ಒಂದು ಉದ್ದಿಶ್ಯ ಇಟ್ಟುಕೊಂಡು ಕೂತಾಗ ಅದು ಬರುವಂಥದ್ದು. ಆ ನಾನು full ಉಂಟಲ್ಲ. ಅವ ಧ್ಯಾನಕ್ಕೆ ಕೂತಿದ್ದಾನೆ. ಆ ನಾನುವಿಗೆ ಏನೆಲ್ಲ ಕಾಣ್ತದೆ. ಧ್ಯಾನಕ್ಕೆ ಕೂತಿದ್ದೆ ಅಂತ ಹೇಳ್ತಾನೆ ಅವ. ಅಷ್ಟೇ. ಕೂರ್ಲಿಕ್ಕೆ ಆಗೋದಿಲ್ಲ. ಇನ್ನು ಇದುಂಟು. ಧ್ಯಾನಕ್ಕೆ ಹೋಗ್ಲಿಕ್ಕೆ ಆಗೋದೇ ಇಲ್ಲ. ಆಗ್ಲಿಕ್ಕೆ ಇದೆಲ್ಲ ನಿಲ್ಬೇಕಲ್ಲ? ಯಾವುದು? ಈ ಮನಸ್ಸು ಹರಡಿಕೊಂಡಿದ್ದದ್ದು ಅದು ನಿಂತಾಗ ಮಾತ್ರ ಸಾಧ್ಯ. ಹಾಗಾದರೆ ಆ ಮನಸ್ಸು, ಬುದ್ಧಿಯ ಸಹಾಯದಿಂದ ಹೋಗ್ಲಿಕ್ಕೆ ಸಾಧ್ಯತೆ ಉಂಟು. ಇನ್ನು ದಾರಿಗಳು ಬೇರೆ ಬೇರೆ ಉಂಟು. ಇನ್ನು ಶರಣಾಗತಿ ಒಂದು ದಾರಿ. ಅದು ನಮಗೆ ಬೇಡ. ಅದು ಈಗ ಆಗೋದಿಲ್ಲ. ಆಯ್ತಲ್ಲ? ಆದರೆ ಇವನ ಅಸ್ತಿತ್ವ ಹೋಯ್ತು. ಶರಣಾಗತಿಯಲ್ಲಿ ಇವನ ಅಸ್ತಿತ್ವವೇ ಇಲ್ಲ. ಅವನಿಗೆ ಶಾಂತಿಯೇ ಮತ್ತೆ. ಎಲ್ಲ ಅವ ನೋಡಿಕೊಳ್ತಾನೆ. ಅಲ್ಲ ಏನು ಬೇಕಾದರೂ ಆಗಲಿ. ಇವನ ಅಸ್ತಿತ್ವ ಹೋಗದೆ, ಯಾವುದು? ಅಸ್ತಿತ್ವ ಇಟ್ಟುಕೊಂಡು, ಶರಣಾಗತಿಯಾದರೆ ಅಲ್ಲಿ ಒಂದು ಉದ್ದಿಶ್ಯ ಉಂಟು. ಸಣ್ಣ ಉದಾಹರಣೆ ಹೇಳುವಾಗ, ಮಹಾಭಾರತದ ಇದು ಕೊಡುವಾಗ ಹೇಳ್ತಾರಪ್ಪ, ದ್ರೌಪದಿ ಕೃಷ್ಣನಿಗೆ ಏನು? ಶರಣಾಗತಿ ಅ್ಞಂ! ಇದು ಶರಣಾಗತಿ ಅಲ್ಲ. ಪ್ರೋಕು ಮುಟ್ಟಿ ಶರಣಾಗತಿ ಆದದ್ದು. ನಮಗೆ ಸಮೃದ್ಧಿ ಇರುವಾಗ, ಶರಣಾಗತಿ ಬರಬೇಕು. ಅಲ್ವ? ಸಮೃದ್ಧಿ ಇರುವಾಗ, ನಮಗೆ ಆ ಶರಣಾಗತಿ ಬಂದರೆ, ಅದು ಶರಣಾಗತಿ. ಇದು ಎಲ್ಲಾ ಸಮಸ್ಯೆಗಳಿಗೆ ಒಂದೇ ಒಂದು ದಾರಿ ಅಂದ್ರೆ, ಶೋಧನೆ. ಶೋಧನೆಗೊಳಪಡಬೇಕಾದರೆ ಮನಸ್ಸನ್ನು ಬುದ್ಧಿಯಲ್ಲಿ ಕೇಂದ್ರೀಕರಿಸಬೇಕು. ಅಲ್ಲಿಂದ ಶೋಧನೆ, ಧ್ಯಾನ ಎಲ್ಲ ಪ್ರಾರಂಭ. ಹಾಗಾದರೆ ಮನಸ್ಸಿನ ಮೇಲೆ ಈಗ ನಿಯಂತ್ರಣ.

ಒಬ್ಬರು – ಮನವ ಶೋಧಿಸಬೇಕು ನಿತ್ಯ, ದಿನದಿನದಿ ಮಾಡಿದ ಪಾಪ ಪುಣ್ಯದ
ಮನವ ಶೋಧಿಸಬೇಕು ನಿತ್ಯ, ದಿನದಿನದಿ ಮಾಡಿದ ಪಾಪ ಪುಣ್ಯದ

ಆತನವರಿಗೆ ಕೇಡಿಲ್ಲ. ಅವ ಪಾತಕ ಪತಿತ ಸಂಗವ ಮಾಳ್ಪನಲ್ಲ (೨)
ನೀತಿವಂತರು ಕೇಳಿ ನಮಗಾತನೆ ಗತಿ, ಇವ ನಮ್ಮ ಪುರಂದರ ವಿಠಲ ॥ ಮನವ ॥

ಎಲ್ಲರೂ – ಸಹನಾವವತು . . . . .
(ಅಜ್ಜನೂ ಸೇರಿ)
ಶ್ಲೋಕ – ಹಿರಣ್ಯಗರ್ಭೇ . . .
ವಂದೇ ಗುರುಪರಂಪರಾ.

ಅಜ್ಜ – ಇದು ಸಾಧನಾ ಶಿಬಿರ ಅಲ್ವ?

ಒಬ್ಬರು – ಹೌದು.

ಅಜ್ಜ – ಇದು ಸಾಧನೆ ಶಿಬಿರವಂತೆ. ಈ ಸಾಧನಾ ಶಿಬಿರದಲ್ಲಿ ನೀವೆಲ್ಲಾ ಭಾಗವಹಿಸಿದವರು. ಅಲ್ಲ? ಭಾಗವಹಿಸದವರಿರ್ಲಿಕ್ಕೂ ಸಾಕು. ಇದು ಶಿಬಿರದ ಮಹತ್ವ ಸಾಧನಾ ಶಿಬಿರ ಎಂಬುದು ಆದ್ರಿಂದ, ಹೆಚ್ಚಿನ ವಿವರಗಳು ಇಲ್ಲಿ ಬೇಕಾಗಿಲ್ಲ. ಯಾಕೆಂದ್ರೆ ಅದು ನಡೆಯುತ್ತಾ ಉಂಟು ಕೆಲವು ಸಮಯದಿಂದ. ಇನ್ನು ಮುಂದೆಯೂ ನಡೆಯುತ್ತಾ ಇರ್ತದೆ. ಇದು ಮಧ್ಯ ಕಾಲದಲ್ಲಿ, ಅದೀಗ ಅದರ ವಿಚಾರ, ಅದೀಗ ನಡೀತಾ ಉಂಟು. ಅಷ್ಟೇ ಸಾಕು. ನಾವು ಶೋಧನಾ ಶಿಬಿರದವರು. ಆ್ಞಂ! ಇದು ಸಾಧನಾ ಶಿಬಿರದಲ್ಲಿ ನಮ್ಮ ಶೋಧನಾ ಶಿಬಿರ ನಾವು ಯಾಕೆ ಇದಕ್ಯಾಕೆ ಹೊಂದಾಣಿಕೆ ತರ್ಬೇಕೀಗ? ಅಲ್ಲಿ ಗೊಂದಲ ಅಲ್ವ? ಆ್ಞಂ! ಅಲ್ಲ. ಸಾಧನೆ ಬೇಕು. ಅದಕ್ಕೆ ನಾವು ಮಹತ್ವ ಕೊಡ್ತೇವೆ. ಆದ್ರಿಂದ್ಲೇ ನಾವಿಲ್ಲಿ ಬರ್ಲಿಕ್ಕೆ ಎಡೆಯಾಯ್ತೋ ಏನೋ. ಆಮೇಲೆ ಶೋಧನಾ ಶಿಬಿರ. ಆದ್ರಿಂದ, ಈ ಸಾಧನಾ ಶಿಬಿರದಲ್ಲಿರುವವರು ಶೋಧನಾ ವಿಚಾರದ ವಿಚಾರ ಇಲ್ಲಿ. ಆ ಸಾಧನೆಯಿಂದ ಶೋಧನೆಗೆ ಕೊಂಡುಹೋಗುವ ಪ್ರಸಂಗ ಉಂಟು. ಅದು ಪ್ರತ್ಯೇಕವಾಗಿ ಹೇಳುವಂತಹ ಅಗತ್ಯ ಬೀಳೋದೇ ಇಲ್ಲ. ಇಲ್ಲಿ starting ಆಗಿ ಹೋಗಿದೆ ಅದು. ಅದುವೇ ಮುಂದೆ ಶೋಧನೆಯಾಗಿ ನಿಲ್ತದೆ. ಈಗ ನಮಗೆ ಏನು ಬೇಕಾದ್ದು? ಮನವ ಶೋಧಿಸಬೇಕು. ಯಾರು? ದೊಡ್ಡ ಪ್ರಶ್ನೆಯಾಯ್ತಲ್ಲ ಇದು. ಮನವ ಶೋಧಿಸಬೇಕು. ಸರಿಯಾದ ವಿಚಾರವೇ. ಯಾವುದು? ಮನವ ಶೋಧಿಸಬೇಕು. ಫಸ್ಟ್ ಇರೋದೇ ಇಲ್ಲಿ ಈಗ. ಇದು ಏನು ವಿಚಾರ ಇದು? ಮನಸ್ಸು ಆ್ಞಂ! ಮನಸ್ಸು ನೀನು ಶೋಧನೆ ಮಾಡು. ಯಾರನ್ನು? ನಿನ್ನನ್ನು ನೀನೇ ಶೋಧನೆ ಮಾಡು. ಮನವ ಶೋಧಿಸಿ. ಯಾರು? ಅದು ಎರಡೂ ಒಂದೇನೇ. ಅದರಲ್ಲಿ ವ್ಯತ್ಯಾಸಗ್ಳೇನೂ ಇಲ್ಲ. ಎರಡೂ ಒಂದೇ. ಮನವನ್ನು ಶೋಧಿಸಬೇಕು. ಅದರ ನಾವು ಎರಡು ರೀತಿಯ ಮೌನದಲ್ಲಿದ್ದುಕೊಂಡು, ಅಂದ್ರೆ ಮಾತು ಮತ್ತು ಮನಸ್ಸು. ಎರಡು ರೀತಿಯ ಮೌನದಲ್ಲಿದ್ದುಕೊಂಡು, ಇದು ಎಂಥ ಮೌನ, ಎಂಬುದನ್ನು ನಾವು ಕೃತಿಯ ರೂಪದಲ್ಲಿ ತೋರಿಸಬೇಕಾಗಿದೆ. ಎಂಥ ಮೌನ ಇದು? ಆ್ಞಂ! ಇದು ಎಂಥ ಮೌನ? ನಿನ್ನೆ ಒಂದು ಪದ್ಯ ಬಂದಿತ್ತು. ಅದಕ್ಕೆ ಹೇಳೋದು ಇದೀಗ. ಇದು ಇಂಥ ಮೌನ. ಎಲ್ಲರಲ್ಲೂ ಇದು ಕೃತಿಯಾಗ್ಬೇಕೀಗ. ಅಂದ್ರೆ, ವಿಧಿ ವಿಧಾನಗಳು ಇಲ್ಲದ ಒಂದು ಮೌನ ಆಗ್ಬೇಕು. ನಮಗೆ ವಿಧಿ ವಿಧಾನಗಳಿದ್ರೆ ಅದು ಸ್ವಲ್ಪ ತೊಂದರೆ ಬರ್ತದೆ. ಎಲ್ರಿಗೂ ಆಗೋದಿಲ್ಲ. ಈಗ ಕಣ್ಣು ಮುಚ್ಚಿ ಧ್ಯಾನ ಮಾಡಬೇಕು. ಶಾಂತಿ, ನೆಮ್ಮದಿ, ಶಾಂತಿ ಇರ್ಬೇಕು. ಅದಾಗೋದಿಲ್ಲ. ಯಾಕೆ ನಮಗೆ ಕೆಲ್ಸ, ವ್ಯವಹಾರ ನಡೀಬೇಕಲ್ಲ. ಹಾಗಾದರೆ ವಿಧಿ, ವಿಧಾನಗಳಿಲ್ಲದ ಒಂದು ಮೌನ, ಇದು ಎಲ್ರಿಗೂ ಅನ್ವಯಿಸುತ್ತದೆ. ಅಡಿಗೆ ಮಾಡುವವರಿಗೆ ಅಡಿಗೆ ಮಾಡುವಾಗ ಮೌನವ್ರತ ಮಾಡಿ ನಿಮ್ಮ ಎಲ್ಲ ಕೆಲಸವನ್ನು ಮಾಡಿ, ಇಲ್ಲವಾದರೆ – – – – ನಿಮ್ಮ ಕೆಲ್ಸಕ್ಕೆ ತೊಂದರೆ ಆಗ್ತದೆ. ನಿಮ್ಮ ಕೆಲಸ ಮಾಡಿಕೊಂಡಿರುವಾಗ ನೀವು ಮೌನವನ್ನು ಮಾಡಿ. ಆ್ಞಂ! ಆವಾಗ ಏನೂ ತೊಂದರೆ ಆಗೋದಿಲ್ಲ. ಯಾರಿಗೂ ತೊಂದರೆ ಆಗಬಾರದು. ನೀವು ನಡೀತಾ ಇರುವಾಗ ನಿಮ್ಮ ಕೆಲಸ ಎಲ್ಲ office ಕೆಲಸ ಮಾಡುವಾಗ ೫ ನಿಮಿಷ ಏನಾಗ್ಬೇಕಲ್ಲಿ? ಸಿಗೋದಿಲ್ವ? ಉಂಟು. ೫ ನಿಮಿಷ ಅಲ್ಲಿ ಮಾಡಿ. ಇದು ವಿಧಿ ವಿಧಾನಗಳಿಲ್ಲದ ಮೌನ. ಯಾವ ಮೌನ. ವಿಧಿ.

*****